ಸಮಾನಾನ ಭಾವದಿಂದಿರುವಂತೆ ಭಾವಿಸಿಕೊಂಡಿರುತ್ತಾನೆ. ಅಲ್ಲದೇ ನಾನು ದೇಹ ಎಂಬ ಜ್ಞಾನವುಂಟಾಗಬೇಕಾದರೆ ಅದಕ್ಕೆ ಮೊದಲು ಆತ್ಮನನ್ನು ಪ್ರಮಾತೃತ್ವವಿರಬೇಕು. ಆದರೆ ದೇಹವನ್ನು ಸೇರಿಸಿಕೊಳ್ಳದೇ ಪ್ರಮಾತೃತ್ವವೇ ಸಿದ್ಧಿಸುವುದಿಲ್ಲ. ಪ್ರಮಾತೃವಾಗದಿರುವಾಗ ಪ್ರಮಾಣಗಳ ಪ್ರವೃತ್ತಿಯೂ ಇಲ್ಲ. ವ್ಯವಹಾರಗಳೂ ಇಲ್ಲ. ಮತ್ತು ಅಸಂಗನಾದ ಆತ್ಮನಿಗೆ ಪ್ರಮಾಣಗಳ ಸಂಸರ್ಗವು ಸಂಭವಿಸುವುದಿಲ್ಲವಾದ್ದರಿಂದ ಈ ಮೂಲಕವಾದ ಅನಾತ್ಮಜ್ಞಾನವು ಹುಟ್ಟಲಾರದು. ಆದರೆ ಅನೇಕ ಅನುಭವಶಾಸ್ತ್ರಗಳಿದ್ದರೂ ನಾನು ಎಂಬ ವ್ಯವಹಾರವುಂಟಾಗುತ್ತದೆಯಾಗಿ ಈ ಜ್ಞಾನವು ಮಿಥ್ಯಾ ಅಧ್ಯಸ್ತವಾಗಿ ಯತ್ನವಿಲ್ಲದೇ ಪ್ರಮಾಣವಿಲ್ಲದೇ ಉಂಟಾಗುತ್ತಿರುವಂತಹ ಈ ನಾನಾ ಜ್ಞಾನವನ್ನು ಶಾಸ್ತ್ರವು ಪ್ರತ್ಯಕ್ಷದಂತೆ ಮಿಥ್ಯಾಜ್ಞಾನ ಅಥವಾ ಅಜ್ಞಾನ ಎಂದು ಕರೆಯುತ್ತಾರೆ. ಇದಕ್ಕೆ ಆವರಣಶಕ್ತಿ ಎಂದಭಿಪ್ರಾಯದಿಂದಲೇ ವಿಕ್ಷೇಪವುಂಟಾಗಿ ಮಾಯಾ ಕಾರ್ಯಗಳು ದರ್ಶನವಾಗುತ್ತವೆಂದೂ, ಸಂಸಾರವು ಇದರಿಂದ ಆಗುತ್ತದೆಂದೂ ಹೇಳುತ್ತಾರೆ. ಪ್ರಮಾಣವಿಲ್ಲದೇ ಉಂಟಾಗುವ ಜ್ಞಾನವು ಅಪ್ರಮಾಣಿಕವಾದುದೇ ಆಗಬೇಕಷ್ಟೇ. ಆದ್ದರಿಂದ ನಾನು ದೇಹ ಎಂಬುದು ಮಿಥ್ಯಾ ಬುದ್ಧಿಯಿಂದಲೇ ಉಂಟಾಗುತ್ತಿರುವುದು. ತನ್ನ ನಿಜಸ್ವರೂಪವು ಏನಿರುವುದು ಎಂದು ತಿಳಿದುಕೊಳ್ಳಲು ಪ್ರಯತ್ನಪಡಬೇಕಾದ್ದು. ಪೂರ್ಣಜ್ಞಾನಸ್ವರೂಪದ ಆತ್ಮನು ತನಗೆ ಅಪರೋಕ್ಷನಾಗಿರುವುದರಿಂದಲೂ, ಪ್ರಕಾಶಿಸುವುದೇ ಇವನ ಸ್ವಭಾವವಾಗಿರುವುದರಿಂದಲೂ, ದೃಶ್ಯಗಳಿಗೆ ಸಾಕ್ಷಿಯಾಗಿಯೇ ತೋರಿಕೊಳ್ಳುತ್ತಾ ಇರುವುದರಿಂದಲೂ ನಾನು ಎಂಬ ಶಬ್ದದ ಆತ್ಮನ ಪ್ರಕಾಶವೆಂದು ಪ್ರಕಾಶವೇ ಆಗಿರುತ್ತದೆ. ಮಿಥ್ಯಾ ಒಂದು ವಸ್ತು ಎಂದು ತೋರಿಕೊಳ್ಳುವಂತೆಂದು ಈ ಜ್ಞಾನವು ನಿಶ್ಚಯ ಜ್ಞಾನವಲ್ಲ ಪ್ರಾಮಾಣಿಕವಾದದಲ್ಲ ನಾನಾ ಅನುಭವದಿಂದಲೂ ಸಿದ್ಧಿಸುತ್ತದೆ. ವಾಸನಾಶಕ್ತಿ ವಾದುದಲ್ಲ. ಆದ್ದರಿಂದ ವಿಚಾರಶೀಲನಾದವನು ಚೆನ್ನಾಗಿ ತಿಳಿದುಕೊಂಡು ತಾನು ಅವಿದ್ಯೆ. ಪರಮಾರ್ಥ ಅನುಭವಸ್ವರೂಪದ ಆತ್ಮನೆಂದು ಅರಿತು ಪ್ರತ್ಯಕ್ಷವಿಲ್ಲದ್ದನ್ನು ನಿಲ್ಲಿಸಬೇಕು.

ಈ ವಿವರಣೆಗಳೆಲ್ಲವೂ ಅಧ್ಯಾರೋಪದೃಷ್ಟಿಯನ್ನು ಗ್ರಹಿಸಿಕೊಂಡು ಬರೆದುದು. ಅಂದರೆ:-
ಸ್ವರೂಪಾಜ್ಞಾನಸ್ಥಿತಿಯ ಜೀವಪುರುಷನು ತನ್ನದೇ ಪ್ರತ್ಯಗಾತ್ಮನಲ್ಲಿ ಅನಾತ್ಮಸ್ವರೂಪಧರ್ಮಗಳನ್ನು
ಕರ್ತಾ ಭೋಕ್ತಾ ಸುಖೀ ದುಃಖೀ ಇತ್ಯಾದಿ ಪ್ರಕಾರಾಂತರಗಳನ್ನು ಸುಳ್ಳುಸುಳ್ಳೇ ಆರೋಪಮಾಡಿಕೊಂ
ಡಿರುತ್ತಾನೆ. ಇದೇ ಅಧ್ಯಾರೋಪವೆಂಬುದಾಗಿರುತ್ತೆ. ಇದರ ಅಪವಾದ ಪ್ರಕ್ರಿಯೆ ಏನೆಂದರೆ :-
ಈ ಮೊದಲು ಅಧ್ಯಾರೋಪಮಾಡಿಕೊಂಡ ಅಂಶಗಳು ಮೇಲೆ ವಿವರಿಸಿದ ವಿಚಾರಗಳಿಂದ ಅಪ್ರಮಾಣಿಕವಾಗಿರುವುದರಿಂದಲೇ ಅಭೇದ್ಯ.
ಅಥವಾ ಮಿಥ್ಯೆ ಎಂದು ಗೊತ್ತಾದ ಬಳಿಕ, ಇವೆಲ್ಲಕ್ಕೂ ಮೂಲವಾಗಿ, ಅಂದರೆ ಆ ಆರೋಪ
ಕಲ್ಪನೆಗಳಿಗೆ ಆಧಾರವಾಗಿ ತನ್ನ ಈ ನಾನಾ ಕಲ್ಪನಾಂಶಗಳನ್ನು ಹೊರತಳ್ಳುವುದಕ್ಕೆ ಆಧಾರ
ವಾಗಿ ಒಂದು ಮೂಲಸದ್ವಸ್ತುವನ್ನು ಇಟ್ಟುಕೊಂಡಿರಬೇಕಷ್ಟೆ! ಅದೇ ಸಚ್ಚಿದಾನಂದ ವಸ್ತುವಾಗಿರುತ್ತೆ.
ವಿಚಾರಪೂರ್ವದಲ್ಲಿ ಕಲ್ಪಿಸಿಕೊಂಡಿದ್ದ ವಸ್ತುಗಳು ಮತ್ತು ಧರ್ಮಗಳು ವಾಸ್ತವದಲ್ಲಿ ಹುಟ್ಟು
ಇಲ್ಲ. ನಾಶವೂ ಇಲ್ಲ. ಆದ್ದರಿಂದಲೂ ಅವುಗಳೊಡನೆ ಆತ್ಮನಿಗೆ ನಿಜವಾಗಿ ಸಂಬಂಧವುಂಟಾ-
ಗಿರುವುದೇ ಇಲ್ಲ. ಹೇಗೆಂದರೆ:- ಇರುವ ಚಂದ್ರನನ್ನು ದೃಷ್ಟಿದೋಷವುಳ್ಳವನು ನೋಡಿ
ಒಂದರಲ್ಲಿ ಎರಡುರೂಪಗಳನ್ನು ನೋಡುತ್ತಾನೆ. ಆಗ ಎರಡನೆಯ ರೂಪವು ಹುಟ್ಟುವುದಿಲ್ಲ.
ಅದೇ ಮನುಷ್ಯನು ದೃಷ್ಟಿದೋಷವನ್ನು ನಿವೃತ್ತಿಮಾಡಿಕೊಂಡು ನೋಡಿದಾಗ ಚಂದ್ರನ ಒಂದೇ
ರೂಪವು ಕಾಣುತ್ತದೆ. ಆಗ ಎರಡನೆಯರೂಪಕ್ಕೆ ನಾಶ ಎಂಬುದು ಹುಟ್ಟುವುದಿಲ್ಲ. ಈ ರೀತಿ
ಸಮ್ಯಗ್ಜ್ಞಾನಮಾಡಿಕೊಂಡು ತನ್ನ ವಾಸ್ತವಾತ್ಮನಿಂದ ಕಲ್ಪಿತಾಂಶಗಳನ್ನು ಹೊರತಳ್ಳುವುದಕ್ಕೆ ಅಪ
ವಾದ ಎನ್ನುತ್ತಾರೆ. ಇದೇ ಅಧ್ಯಾರೋಪಗಳನ್ನು ಅಲ್ಲಗಳೆಯುವುದು ಅಥವಾ ನಿವರ್ತನಗೊಳಿಸುವುದು.
ಅಪವಾದ = ಅಬಾಧ, ಈ ಬಾಧಜ್ಞಾನವು ವೇದಪ್ರಮಾಣಗಳಿಂದಲೇ ತಿಳಿಯುವುದು. ಆತನೊಬ್ಬನು
ಚೇತನ. ಮಿಕ್ಕ ದೇಹ ಇಂದ್ರಿಯ ಪ್ರಾಣಾದಿಗಳನ್ನು ಬುದ್ಧಿ ಎಲ್ಲವೂ ಅಚೇತನವಾಗಿರುವುದು. ಅನುಭವ
ಕರತಲಸ್ಥವು ಗೊತ್ತಾದಾಗ. ಈ ಮೊದಲು ಕಲ್ಪಿಸಿಕೊಂಡಿದ್ದ ಭೇದ ಭೇದಾಭೇದಗಳೆಂಬ ಭಾವನೆ
ನಿವೃತ್ತಿಯೊಂದುವುದು. ಆಗ ಸ್ವಯಮೇವ ಸ್ವರೂಪಾನುಭವವಾದಂಥ ಮುಖ್ಯೋಗನಿದ್ದು ಆಗು
ವುದು. ಇದೇ ಬ್ರಹ್ಮೈಕ್ಯವೆಲ್ಲವೆಂಬ ಪಾರಮಾರ್ಥಿಕ ಸಚ್ಚಿದಾನಂದನಿಧಿಯಾದ ಅಪರೋಕ್ಷ
ಬ್ರಹ್ಮಾತ್ಮಾನುಭವ, ಮೋಕ್ಷಪ್ರಾಪ್ತಿಯಾಗುವುದು. ಓಂ. ಓಂ. ಓಂ.

श्रुतिषु सविशेषनिर्विशेषत्वेन द्विधा ब्रह्म श्रूयते। न तत्र कालभेदः वस्तुभेदो वा कल्प्यः। प्रतिपत्तृभेदात् एकस्मिन् युगपदेव सविशेषत्वनिर्विशेषत्वोपपत्तिः। नहि विद्वांसो मुक्ताः कदाचिदपि सर्वज्ञत्व सत्यसङ्कल्पत्वादिगुणयुक्ता वयमिति प्रतिपद्यन्ते। तादृशप्रतिपत्तिहेतुभूतायाः अविद्यायाः विनाशितत्वात्। बद्धास्तु अविद्यायुक्ताः सन्तः निर्विशेषमेव ब्रह्म सर्वज्ञत्वादिगुणविशिष्टं कल्पयन्ति।

निरुपाधिकं ब्रह्म, सोपाधिकः ईश्वरः साक्षी कूटस्थः।
जीवः = अविद्याकार्योपाधिकः, ईश्वरः कारणरूपमायोपाधिकः॥

ಪ್ರತಿಬಂಧಕಗಳ ಚಿಂತನೆ.

ಮನುಷ್ಯಾದಿ ಸರ್ವಪ್ರಾಣಿಗಳೂ ನಿಜಾತ್ಮನ ವಾಸ್ತವದಲ್ಲಿ ಶುದ್ಧಪರಮಾನಂದನೇ ಆಗಿರುತ್ತಾನೆ. ಅದನ್ನು ಸುಲಭವಾಗಿರುವುದಿಲ್ಲ. ಅದಕ್ಕಾಗಿ ಪ್ರಯತ್ನಮಾಡದೆ ಸಿಕ್ಕುವುದಿಲ್ಲ. ತಿಳಿಯುವುದೂ ಇಲ್ಲ. ಸ್ವಸ್ವರೂಪಾನುಭವವಾಗುವುದಿಲ್ಲ. ಆ ಅದ್ವಿತೀಯಾತ್ಮನು ಸಾಕ್ಷಾದಪರೋಕ್ಷವಸ್ತುವಾಗಿದ್ದರೂ ತಿಳಿಯದೆ ಇರುವುದಕ್ಕೆ ಕಾರಣಗಳು ಅನೇಕ ಬಲವತ್ತರವಾಗಿರುತ್ತವೆ. ಪ್ರಮಾಣಾವಲಂಬನ ಮತ್ತು ದೋಷನಿವಾರಣಾ ಯತ್ನವಿಲ್ಲದೆ ಉಂಟಾಗುವ ಜ್ಞಾನವು ಸ್ವಪ್ನದಂತೆ ಯಥಾರ್ಥವಾಗಿರದೆಂದು ಹಿಂದಿನ ಪ್ರಕರಣದಲ್ಲಿ ತಿಳಿಸಿದೆ. ಅಲ್ಲದೆ ಸರಿಯಾದ ತಿಳಿಯಲು ಅನೇಕ ಪ್ರತಿಬಂಧಕಗಳಿರುವುದರಿಂದಲೂ ಸಮ್ಯಗ್ಜ್ಞಾನವು ಅಶಕ್ಯವಾಗಿದೆ. ಅದ್ವೈತ ಬ್ರಹ್ಮವು ವಾಸ್ತವವಾಗಿರುವಂತೆ ಅಂತಹ ಸ್ವರೂಪಜ್ಞಾನವಿಲ್ಲದಿರುವುದೂ ಸ್ವಾಭಾವಿಕವಾಗಿದೆ, ನೈಸರ್ಗಿಕವಾಗಿರುತ್ತೆ ಈ ಅಂಶಗಳ ವಿಚಾರಗಳು ಹೀಗೆ ಇರುತ್ತವೆ:-

ಆತ್ಮಾನುಭವಕ್ಕೆ ಪ್ರತಿಬಂಧಕಗಳು.

1 ಮೂಲಕಾರಣ ಅಥವಾ ಆದಿಕಾರಣ. = ಮೂಲಾಜ್ಞಾನ ಅಥವಾ ಸ್ವರೂಪಾಜ್ಞಾನ.
2. ಮುಖ್ಯಕಾರಣ = ಆತ್ಮವಿಸ್ಮೃತಿ; ಅವಿದ್ಯೆ.
3. ಪ್ರಧಾನಕಾರಣ = ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸ. ಮಿಥ್ಯಾಜ್ಞಾನ.
4. ಪ್ರಬಲಕಾರಣ = ಮಾಯೆ - ಮೋಹ.
5. ಸಂಶಯಾದ್ಯನೇಕ ಕಾರಣಗಳು. ಉಂಟೋ ಇಲ್ಲವೋ! ಏಕವೋ ಅನೇಕವೋ! ಇತ್ಯಾದಿ ಸಂದೇಹ ಮತ್ತು ವಾದಿಗಳ ಪ್ರತಿವಾದಗಳು.
6. ಪ್ರಮಾಣದೌರ್ಲಭ್ಯ.
7. ಸಾಧನಾಭಾವ.
8. ದುಷ್ಕರ್ಮಪ್ರಾಬಲ್ಯ. ಇಷ್ಟುಮಾತ್ರವಲ್ಲದೆ ಇನ್ನೂ ಅಜ್ಞಾತವಾದ ಪ್ರತಿಬಂಧಕಗಳಿರಬಹುದು. ದುರಿತವಿಶೇಷಗಳಿರುವಾಗ ಆಸುರೀಸಂಪತ್ತಿನ ಅಧಿಕಾರವೇ ನಡೆಯುವುದು. ದೈವೀ ಸಂಪತ್ತು ಸ್ಥಗಿತವಾಗುವುದು. ದುರಿತವೇಗವು ಕಡಿಮೆಯಾದರೆ ಅಧ್ಯಾತ್ಮಸಾಧನೆ ಮೊದಲಾಗುವುದು. ಸಾಧನೆಯು ಹೆಚ್ಚಿದಂತೆ ಪ್ರಮಾಣವು ಅಂದರೆ ಶಾಸ್ತ್ರಾಚಾರ್ಯೋಪದೇಶಗಳು ಲಭ

ಪ್ರತಿಬಂಧಕಗಳಿರುವಾಗ ಫಲಪ್ರತಿಯೋಗಿಗಳಿರುವ.

 ಉಪದೇಶಗಳ ಉಪಯೋಗ ಆಗದೇ ಹೋಗುವುದು. ಪ್ರಮಾಣಗಳು ವ್ಯರ್ಥವಾ-
ತ್ತ, ಇದ್ದರೆ ಪ್ರತಿವಾದಿಗಳ ವಾದಗಳೂ ಸಂಶಯಗಳೂ ಅಡಗಿಹೋಗುವುವು. ಆಗ
ವಿಮರ್ಶನದ ಸಾಧನಗಳು ಹೆಚ್ಚಿದಂತೆಲ್ಲಾ ಪ್ರತಿಬಂಧಕದ ಬಲವು ಕಡಿಮೆಯಾ-
ಗುವುದು. ಉಪದೇಶಕ್ಕೆ ಮನಸ್ಸಿನ ಪ್ರಭಾವವು ಕ್ಷೀಣಿಸುವುದು. ಇಂಥ ಸಾಧನೆ ಮತ್ತು
ಪ್ರಮಾಣಗಳ ಮೂಲಕ ಆತ್ಮಸ್ವರೂಪದ ನಿದಿಧ್ಯಾಸನದ ಅಭ್ಯಾಸವು ನಿರಂತರವಾದರೆ ಅವಿದ್ಯೆ ಅಥವಾ
ಅನ್ಯೋನ್ಯಾಧ್ಯಾಸವು ತಪ್ಪುವುದು. ತಪ್ಪು ತಿಳುವಳಿಕೆಯು ಹೋಗಿ ಯಥಾರ್ಥ ಜ್ಞಾನವು
ಉಂಟಾಗುವುದು. ಈ ಮಿಥ್ಯಾಜ್ಞಾನ ತಪ್ಪಿದಾಗಲೇ ಸ್ವಸ್ವರೂಪದ ಅರಿವಾಗುವುದು.
ಆತ್ಮನ ಸ್ವರೂಪವು ತಿಳಿದರೆ ಬ್ರಹ್ಮನ ನೆನಪು ಭದ್ರವಾಗಿ ಉಳಿಯುವುದು. ಆಗಲೇ
ಆವರಣಾಶಕ್ತಿ ಎಂಬ ಮೂಲಾಜ್ಞಾನವು ನಾಶಹೊಂದಿ ಜ್ಞಾನಸ್ವರೂಪದ ಅಹಂ ಬ್ರಹ್ಮಾಸ್ಮಿ ಎಂಬ
ಅಪರೋಕ್ಷವಾಗಿ ಶುದ್ಧ ಪರಮಾನಂದಾನುಭವವು ಸ್ಫುರಿಸುವುದು.

ಈ ಮೇಲೆ ತಿಳಿಸಿರುವಂತೆ ಅನೇಕ ಪ್ರತಿಬಂಧಕಗಳು ಇರುವುದರಿಂದ ಆ ಮೂಲಾಜ್ಞಾನಾದಿಗಳು ಮನುಷ್ಯನಿಗೆ
ತನ್ನ ನಿಜಾತ್ಮನ ಮರೆಯುವಂತೆ, ತಿಳಿಯದಂತೆ ಅನಾದಿಕಾಲದಿಂದಲೂ ಆತ್ಮ
ದೇವನನ್ನು ರಹಸ್ಯವಾಗಿಯೇ ಪರೋಕ್ಷವಾಗಿಯೇ ಇರುವಂತೆ ಮಾಡಿರುತ್ತವೆ.

ಪ್ರತಿಬಂಧಕಗಳಲ್ಲಿ ಮೊದಲನೆಯದಾದ ಮೂಲಕಾರಣ ಅಥವಾ ಆದಿಕಾರಣ.
ಇದನ್ನು ವಿಚಾರಿಸೋಣ. ಮೂಲಾಜ್ಞಾನವೆಂಬ ಸ್ವರೂಪಾಜ್ಞಾನವೇ ಈ ಸಂಸಾರಕ್ಕೆಲ್ಲ
ನಿದಾನವೆಂದು ಶಾಸ್ತ್ರದಲ್ಲಿ ತಿಳಿಸಿಕೊಟ್ಟಿದ್ದಾರೆ. ಸ್ವಸ್ವರೂಪದ ಅಜ್ಞಾನವೇ ಮೂಲವಾದ ಅಜ್ಞಾನ.
ಅಜ್ಞಾನವೆಂದರೆ ಜ್ಞಾನದ ಅಭಾವ ಎಂದು ಕೆಲವರು ತಿಳಿಯುತ್ತಾರೆ. ಅದು ಸರಿಯಲ್ಲ.
ಏಕೆಂದರೆ ಆತನು ನಿತ್ಯ ಜ್ಞಾನಸ್ವರೂಪನೇ ಆಗಿರುವುದರಿಂದ ಜ್ಞಾನಾಭಾವವೆಂಬುದೇ ಇಲ್ಲ.
ಆದರೂ ಮನುಷ್ಯನು ಅಪರೋಕ್ಷವಾಗಿಯೇ ನಾನು ನನ್ನ ನಿಜವನ್ನು ಅರಿಯೆನು ಎನ್ನುತ್ತಾನೆ.
ಆದ್ದರಿಂದಲೇ ಶಾಸ್ತ್ರಕಾರರು ಇದನ್ನು ಅವಿದ್ಯೆ - ವಿದ್ಯಾವಿರೋಧಿ ಎಂದೂ, ನ ವಿದ್ಯಾ
ಇತಿ ಅವಿದ್ಯಾ ಎಂದೂ ವಿವರಿಸಿರುತ್ತಾರೆ. ಇದು ಸ್ವಾಭಾವಿಕ ಅಥವಾ ಪ್ರಯತ್ನವಿಲ್ಲದೆ
ಉಂಟಾಗುವುದರಿಂದಲೇ ಈ ಅಜ್ಞಾನವನ್ನು ಕತ್ತಲೆಯಂತೆ ತಮಸ್ಸು, ಆವರಣ ಎನ್ನುವರು ಎಂದೂ ಕರೆಯು-
ತ್ತಾರೆ. ಮನುಷ್ಯನಿಗೆ ಅಪರೋಕ್ಷವಾಗಿಯೇ ನಾನು ಎಂಬ ಸ್ವಾಭಾವಿಕವಾದ ಜ್ಞಾನವಿರುತ್ತದೆ.

ಈ ಜ್ಞಾನಕ್ಕಾಗಿ ಉತ್ಪನ್ನವಾಗುವುದಿಲ್ಲ. ಪ್ರಮಾಣವನ್ನು ಬಯಸುವುದಿಲ್ಲ. ಪ್ರಮಾಣವೇ ಇಲ್ಲ
ದೆ ಉಂಟಾಗುವ ಈ ಜ್ಞಾನವು ಅಪ್ರಾಮಾಣಿಕವಾದುದೆನ್ನಬೇಕು. ಆದರೆ [ಅಪರೋಕ್ಷವಾಗಿಯೇ] ಉಂಟಾಗುತ್ತದೆ. ಈ
ನಿರಾಧಾರ ಭಾಸವಾಗಿರುತ್ತದೆ. ಅಜ್ಞಾನಾಧ್ಯಾಸವು
ನಾನು ಎಂಬ ಅನುಭವವು ಸ್ವಾಭಾವಿಕವಾಗಿರುತ್ತದೆ. ಅನುಭವವನ್ನು ಅಲ್ಲಗಳೆಯಲಾಗುವುದಿಲ್ಲ.
ಆದ್ದರಿಂದ ಈ ಜ್ಞಾನವು [ಅಂದರೆ] ಅಜ್ಞಾನವಾಗಿದ್ದರೂ ಮೊಲದ ಕೊಂಬು ಎಂಬಂತೆ ಅಭಾವರೂಪವಲ್ಲ.
ಭಾವವನ್ನು ಲಕ್ಷಣಸ್ವರೂಪಗಳಿಂದ ನಿರ್ವಚನ ಮಾಡಲು ಶಕ್ಯವುಂಟು. ಈ ಸ್ವರೂಪಾಜ್ಞಾನವನ್ನು
ನಿರ್ವಚನ ಮಾಡಲು ಶಕ್ಯವಿಲ್ಲ. ಜ್ಞಾನಸ್ವರೂಪದ ಅದ್ವಿತೀಯಾತ್ಮನಲ್ಲಿ ವಾಸ್ತವವಾಗಿ ಅವಿದ್ಯೆ
ಎಂಬ ಅಜ್ಞಾನವಿಲ್ಲದಿದ್ದರೂ [ನಾನು ನನ್ನ ನಿಜಸ್ವರೂಪವನ್ನು ಅರಿಯದವನು ಎಂಬ ಅನುಭವದ ಮೂಲಕ] ಮನುಷ್ಯನು ನಿಜಾತ್ಮನ ಅನುಭವವಿಲ್ಲದವನಾಗಿ ಕಂಡುಬರುವು
ದರಿಂದ ಅವಿದ್ಯೆಯಿಂದಲೇ ಮನುಷ್ಯನು ಅಜ್ಞಾನಿಯಾಗಿರುತ್ತಾನೆಂದು ನಿಶ್ಚಯಿಸಬೇಕಾಗಿದೆ.
ಆದ್ದರಿಂದಲೇ ಈ ಅಜ್ಞಾನವನ್ನು [ತಮಃಶಬ್ದವಾಚ್ಯವಾದ] ಭಾವರೂಪವೆಂದು ಹೇಳುತ್ತಾರೆ. ಆತ್ಮನು ಭಾವರೂಪನಲ್ಲ.
ಭಾವವಸ್ತುವಿನಲ್ಲಿ ಷಡ್ವಿಕಾರಗಳು ಸ್ವಾಭಾವಿಕವಾಗಿರುತ್ತವೆ. ಆತ್ಮನು ವಿಕಾರಿಯಾಗಿರುವುದಿಲ್ಲ.
ಇಂತಹ ಅಜ್ಞಾನದಿಂದಲೇ ಅಜ್ಞಾನಕ್ಕೆ ಸಿದ್ಧಿ ಎನ್ನಬೇಕಾಗಿದೆ. ಆದ್ದರಿಂದಲೇ ಸರಿಯಾದ ಜ್ಞಾನದಿಂದ
ಇದಕ್ಕೆ ಪೂರ್ತಿಯಾಗಿ ನಿವೃತ್ತಿ ಎಂಬುದೂ ಸಿದ್ಧವಾಗುವುದು. ಈ ಅಜ್ಞಾನಕ್ಕೆ ಮೂಲವು ತಿಳಿಯು
ವುದಿಲ್ಲ. [ವಾಸ್ತವದಲ್ಲಿ ಇದ್ದುಬಿಡುತ್ತದೆ.] ಆದರೆ ಪ್ರತಿಯೊಬ್ಬರಿಗೂ ಅಪರೋಕ್ಷವಾಗಿಯೇ ಇದ್ದುಬಿಟ್ಟಿರುತ್ತದೆ. ಇದು ಸತ್ಯಸ್ವರೂಪವು
ಇದರ ಮೂಲಕವೇ ಸೃಷ್ಟಿ ಸ್ಥಿತಿ ಲಯ ಶಕ್ತಿಗಳು [illegible]
ಆಗಿರುವುದಿಲ್ಲ. ಇದು ಬೇರೆ ವಸ್ತುವೂ ಆದುದಲ್ಲ. ಆದರೆ ~~[illegible]~~ ತ್ತವೆ
ಜನನ ಪಾಲನ ಲಯದ ಪ್ರಾಣ ದರ್ಶನ ಶ್ರವಣ ಗತಿ ಚಲನವು ಮೊದಲಾದ ಅನಂತ ಶಕ್ತಿಗಳು ಇವುಗಳ ಮೂಲಕ
ಮನುಷ್ಯನ ನಿಜಾತ್ಮನಾದ ಬ್ರಹ್ಮವನ್ನು ಮುಚ್ಚಿರುವುದರಿಂದ ಇದೇ ಆವರಣಾಶಕ್ತಿಯಾಗಿದೆ.
ಈ ಅಜ್ಞಾನಕ್ಕೆ ಬ್ರಹ್ಮವನ್ನುವೇ ವಿಷಯವು. ನಿಜಾತ್ಮನೇ ಆಶ್ರಯವು. ಎಂದು ಗೊತ್ತುಮಾಡ
ಬೇಕಾಗಿದೆ. ಶುದ್ಧ ಪರಮಾನಂದ ಬ್ರಹ್ಮವನ್ನು ಮುಚ್ಚಿರುವುದರಿಂದಲೇ ಬ್ರಹ್ಮಾನುಭವವಾಗುವುದಿಲ್ಲ.
ತಮಸ್ಸು ಯಾವ ಆಶ್ರಯದಲ್ಲಿ ಇರುತ್ತದೆಯೋ ಅದನ್ನು ಅದು ಮುಚ್ಚಿರುವುದು ಲೋಕದಲ್ಲಿ ಪ್ರಸಿದ್ಧವಾಗಿದೆ.
ಒಟ್ಟಿನಲ್ಲಿ ಸ್ವರೂಪಾಜ್ಞಾನ ~~[illegible]~~ [ಇರುವುದರಿಂದ] ಪ್ರಮಾಣವಿಲ್ಲದೇ (ಸಾಮಾನ್ಯವಾಗಿ) ನಾನು ಎಂದು ಸಾಮಾನ್ಯವಾಗಿ ತಿಳಿ
ಯುತ್ತಿರುವ [~~[illegible]~~ ಜ್ಞಾನವು] (ಅಜ್ಞಾನವು) ತಮೋರೂಪವಾಗಿದೆ. ಅಭಾವರೂಪವಲ್ಲದ್ದರಿಂದ ಭಾವರೂಪವಾಗಿದೆ.
ಯಥಾರ್ಥಜ್ಞಾನಕ್ಕೆ ಪ್ರತಿಬಂಧಕವಾದ ಮಿಥ್ಯಾಜ್ಞಾನಕ್ಕೆ ಕಾರಣವಾಗಿರುತ್ತದೆ. ಆತ್ಮವಿಸ್ಮೃತಿಯು
ಬುದ್ಧಿವಿನಿಕ್ಕೊಂಡಿರುತ್ತದೆ. ಈ ಸ್ವರೂಪಾಜ್ಞಾನಕ್ಕೆ ಅವಿದ್ಯೆ ಎಂದು ಹೆಸರು.
ಆತ್ಮವಿಸ್ಮೃತಿ. ಮಿಥ್ಯಾಜ್ಞಾನಗಳು ಇದರ ಪ್ರಕಾರಗಳು

ಸ್ವರೂಪಾಜ್ಞಾನವೆಂಬ ಈ ಅವಿದ್ಯೆಗೆ ಆತ್ಮವಿಸ್ಮೃತಿ ಎಂಬ ಅವಿದ್ಯೆಯೇ ಕಾರಣವು. — ತಾನು ಶುದ್ಧಪರಮಾನಂದನು ಎಂಬ ಅರಿವು ಅಥವಾ ಸ್ಮೃತಿಯು ಇದ್ದಿದ್ದರೆ ಈ ಅಜ್ಞಾನವು ಇರುತ್ತಲೇ ಇರಲಿಲ್ಲ. ಆತ್ಮನು ಜ್ಞಾನಸ್ವರೂಪನಾಗಿದ್ದರೂ ಹಿಂದೆ ಎಂದೂ ಆ ಶುದ್ಧಪರಮಾನಂದಾನುಭವವು ಈ ಸಾಮಾನ್ಯ ಮನುಷ್ಯನಿಗೆ ಇರಲಿಲ್ಲವಾದ್ದರಿಂದಲೇ ಅದರ ಸ್ಮರಣೆಗೂ ಅವಕಾಶವಾಗಲಿಲ್ಲ. ಅಂತು ಆತ್ಮವಿಸ್ಮೃತಿ ಎಂಬ ಅವಿದ್ಯೆಯೇ ಅಜ್ಞಾನಕ್ಕೆ ಮುಖ್ಯಕಾರಣವಾಗಿದೆ. ಆತ್ಮಜ್ಞಾನಕ್ಕೆ ಪ್ರತಿಬಂಧಕವಾಗಿದೆ. ಈವರೆಗೆ ಹೇಳಿರುವುದೂ ಕೂಡ ಸ್ವರೂಪಾಜ್ಞಾನವೇ = ಅವಿದ್ಯೆಯೇ. ಇದೇ ಆತ್ಮಮಾಯೆಯೆಂಬ ವಿಕ್ಷೇಪಮಾಯೆ. ಮತ್ತು ಆತ್ಮವಿಸ್ಮೃತಿಯುಳ್ಳ ಮನುಷ್ಯನು ನಿಜವಾದ ತನ್ನನ್ನೇ ಮರೆತು ಅಜ್ಞಾನಿಯಾಗಿಯೇ ಇರುವುದರಿಂದ ಮತ್ತು ಬಾಹ್ಯಜಗತ್ತಿನಲ್ಲಿ ಆಸಕ್ತಿಯುಳ್ಳವನಾಗಿರುವುದರಿಂದ, ಆತ್ಮನ ಪ್ರಕಾಶಿಸುವುದು ಅರಿಯುವುದು ಮತ್ತು ವಿಷಯಗಳಲ್ಲಿ ತತ್ಪರನಾಗಿಯೇ ಇರುವುದು ಸ್ವಭಾವವಾಗಿರುವುದರಿಂದ ಮನುಷ್ಯನಿಗೆ ದೇಹಸಂಘಾತದಲ್ಲಿ ನಾನು ಎಂಬ ಜ್ಞಾನವು ಸ್ವಾಭಾವಿಕವಾಗಿಯೇ ಉಂಟಾಗುವುದು ಸಹಜವಾಗಿದೆ. ಮತ್ತು ಇದರಿಂದಲೇ ತಾನು ಸಂಘಾತಾತ್ಮಕನು ಎಂಬ ಭ್ರಮೆ ಅಥವಾ ಮಿಥ್ಯಾಜ್ಞಾನವುಂಟಾಗಲು ಅವಕಾಶವುಂಟಾಗುವುದು. ದೇಹದಲ್ಲಿ ನಾನು ಎಂಬ ಜ್ಞಾನವು ವಿಪರ್ಯಯವಾಗಿದೆ. ದೇಹದಲ್ಲಿ ಆತ್ಮಾರೋಪ, ಆತ್ಮನಲ್ಲಿ ದೇಹಾರೋಪ. ರಜ್ಜುವಿನಲ್ಲಿ ಹಾವು ಎಂಬುದು ಹೇಗೆ ತಪ್ಪುತಿಳುವಳಿಕೆಯೋ ಹಾಗೆಯೇ ನಾನು ದೇಹ ಎಂಬುದೂ ಭ್ರಮೆಯೇ. ಅವಿದ್ಯೆಯೇ. ಇದು ಪ್ರಮಾಣದಿಂದ ಹುಟ್ಟಿದುದೇನೂ ಅಲ್ಲ.

ಹೀಗೆ ಮಿಥ್ಯಾಜ್ಞಾನ, ಆತ್ಮವಿಸ್ಮೃತಿ, ಸ್ವರೂಪಾಜ್ಞಾನ ಎಂಬಿವು ಮೂರೂ ಪರಸ್ಪರ ಮಿಳಿತವಾಗಿಯೇ ಅನ್ಯೋನ್ಯಾಶ್ರಯವುಳ್ಳದ್ದಾಗಿಯೇ ಇರುತ್ತವೆ. ಹೀಗಿರುವುದನ್ನು ನ್ಯಾಯ ವಿರುದ್ಧವೆಂದು ಹೇಳುವಂತಿಲ್ಲ. ಹಾಗೆ ಅನುಭವವೇ ಉಂಟಾಗುತ್ತಿರುವುದರಿಂದ ಇನ್ನು ಅನುಪಪತ್ತಿ ಹೇಳಿ ಪ್ರಯೋಜನವೇನು? ಅಜ್ಞಾನದಿಂದಲೇ ಅಜ್ಞಾನಕ್ಕೆ ನಿದ್ರೆಯುಂಟಾಗುತ್ತಿರುವುದು. ಈ ಸೂಕ್ಷ್ಮವನ್ನು ಸೂಕ್ಷ್ಮ ಉಪಾಯದಿಂದಲೇ ಗ್ರಹಿಸಬೇಕು. ಆತ್ಮನು ಚೇತನ. ಅಜ್ಞಾನವು ಜಡವಾಗಿದೆ. ಇದು ತಮೋರೂಪವಾಗಿರುವುದರಿಂದ ಅಭಾವರೂಪವಲ್ಲ. ಅಭಾವಕ್ಕೆ ಪ್ರತ್ಯೇಕಸ್ವರೂಪವಿರುವುದಿಲ್ಲ. ಆದ್ದರಿಂದಲೇ ಅಜ್ಞಾನವು ಮನೋಬಿಂದು ಪ್ರಸ್ತ ಎಂಬಿಗೆ

ತ್ರಿಪುಟಿಭಾವವಿಲ್ಲ

* ಜ್ಞಾನದ ಆಶ್ರಯ ವಿಷಯಗಳು ಅಭಿನ್ನವಾಗಿರುವುದರಿಂದ ಸ್ವಾತಿರಾವವು ಇಲ್ಲ.

ಭಾವರೂಪವಾಗಿದೆ. ಇದು ಅನಾದಿಯಾಗಿದ್ದರೂ ~~[illegible]~~ ಬ್ರಹ್ಮಜ್ಞಾನದಿಂದ ನಾಶಹೊಂದು
ವುದಾಗಿರುವುದು. ಇದು ಅನಿರ್ವಚನೀಯವೆಂದು ಹೇಳಿದೆ. ಈ ಅವಿದ್ಯೆಗೆ ಪೂರ್ವದಲ್ಲಿ
ಕಾರಣವಾದದ್ದು ಮತ್ತೇನೂ ಇರುವುದಿಲ್ಲ. ಮತ್ತ ರಜ್ಜುಸರ್ಪಭ್ರಾಂತಿಸ್ಥಳದಲ್ಲಿರುವಂತೆ
ಇಂದ್ರಿಯಾರ್ಥಸನ್ನಿಕರ್ಷವಿರುವುದಿಲ್ಲ. ಆದರೂ ಸಾಮಾನ್ಯಮನುಷ್ಯನಿಗೆ ನಾನು ನನ್ನನ್ನು ಸರಿಯಾಗಿ
ಅರಿಯೆ ಎಂಬ ಅನುಭವವುಂಟಾಗುತ್ತಿರುವುದು. ಹೀಗೆ ಅಪರೋಕ್ಷವಾಗಿ ಅನುಭವಕ್ಕೆ
ಗೋಚರವಾಗುತ್ತಿರುವ ಪದಾರ್ಥವೇ ಅಜ್ಞಾನವು. ಈ ಅಜ್ಞಾನದ ಕಾರ್ಯವೇ ಆತ್ಮಾನಾತ್ಮರ
ಅನ್ಯೋನ್ಯಾಧ್ಯಾಸರೂಪದ ಮಿಥ್ಯಾಜ್ಞಾನವು. ಈ ಎಲ್ಲ ಅವಿದ್ಯೆ ಎಂಬ ಪದಕ್ಕೆ ಸೇರಿದೆ
~~ಹೀಗೆ ಅವಿದ್ಯೆ ಎಂಬ ಆವರಣಶಕ್ತಿಯು ಎಷ್ಟರಲ್ಲಿ ನಿಲ್ಲುವುದೋ ಅಲ್ಲಿಯೇ ವಿಕ್ಷೇಪ~~
~~ಶಕ್ತಿಯೂ~~ ನಾನು ಎಂಬ ಈ ಜಡಚೇತನಗಳ ಮಿಥುನಭಾವವೆಂಬ ಅವಿದ್ಯೆಯು ಸ್ವಸ್ವರೂಪಾ-
ನುಭವಕ್ಕೆ ಹೆಚ್ಚಿನ ಪ್ರತಿಬಂಧಕವಾಗಿರುವುದು, ಪ್ರಧಾನಕಾರಣವಾಗಿದೆ.

ಈ ರೀತಿ ಪ್ರಧಾನವಾಗಿ ಪ್ರತಿಬಂಧಕವಾದ ಅವಿದ್ಯೆಯು - ಆವರಣಶಕ್ತಿಯು ಎಲ್ಲಿರುವು
ದೋ ಅಲ್ಲಿಯೇ ವಿಕ್ಷೇಪಶಕ್ತಿ ಎಂಬ ಮಾಯೆಯೂ ಆವಿರ್ಭವಿಸುವುದು. ಮಾಯೆ ಎಂ
ದರೆ ವಿಸ್ಮೃತಾತ್ಮನ ಸ್ವಭಾವ ಅಥವಾ ಮಹಿಮೆಯಾಗಿರುತ್ತದೆ ಕಲ್ಪಿತ ಪ್ರಕೃತಿಯಾಗಿದೆ. ಇದನ್ನು ಕೂಡ ಆತ್ಮನಿಂ
ಭಿನ್ನವೆಂದಾಗಲೀ ಅಭಿನ್ನವೆಂದಾಗಲೀ ಹೇಳಲಾಗುವುದಿಲ್ಲ. ಆದ್ದರಿಂದ ಮಾಯೆಯೂ
ಅನಿರ್ವಚನೀಯವೇ. ಅಂದರೆ ಬೇರೆನಿಂ ಭಿನ್ನವಾಗಿರುತ್ತದೆ. ಇದು ಜಡಶಕ್ತಿರೂಪವಾಗಿರುತ್ತದೆ.
ಇದರ ಶಕ್ತಿಯು ಎರಡು ಪ್ರಕಾರವಾಗಿ ಬೆಳೆದುಕೊಳ್ಳುವುದು. ಒಂದು ಸೃಜನಶಕ್ತಿ.
ಇನ್ನೊಂದು ಮೋಹಕಶಕ್ತಿ. ಇದರಿಂದಲೇ ಅಂದರೆ ಆತ್ಮಸ್ವಭಾವವೆಂಬ ಪ್ರಕೃತಿಯಿಂ
ದಲೇ ಪ್ರಪಂಚವೆಲ್ಲಾ ಹುಟ್ಟಿಕೊಂಡು ತೋರುತ್ತಾ ಆತ್ಮನೇ ಮೋಹಗೊಂಡಿರುವಂತೆ
ಆಗಿದೆ. ಆತ್ಮನೇ ಸಂಸಾರಿಯಂತಾಗಿರುತ್ತಾನೆ. ಶುದ್ಧಪರಮಾನಂದನೂ ಕೇವಲದೃಗ್ರೂಪ
ಸಾಕ್ಷಿಯೂ ಆಗಿರತಕ್ಕ ಆತ್ಮನು ದೃಶ್ಯವನ್ನು (ಮಾಯಾರೂಪವನ್ನು) ನೋಡುತ್ತಾ ನೋಡುತ್ತಾ
ಪ್ರೇಕ್ಷಕನೆಂಬ ಪ್ರಮಾತೃವಾಗಿಬಿಟ್ಟಿರುತ್ತಾನೆ. ಸಾಕ್ಷಿತ್ವವನ್ನು ಗ್ರಹಿಸಲಾರದ ಬಹಿರ್ಮುಖ
ನಾಗಿರುತ್ತಾನೆ. ಮಿಥ್ಯಾಜ್ಞಾನವಶವನಾಗಿ ಸಂಸಾರಿಯಾಗಿರುತ್ತಾನೆ. ಈ ರೀತಿ ಮೋಹ

78 ಮತ್ತು ಮಾಯೆಗೆ ನಿಕೃಷ್ಟಕ್ಕಿಂತ ಪ್ರಬಲಕಾರಣವಿರುವುದರಿಂದಲೇ ಸ್ವರೂಪಾನುಭವಕ್ಕೆ ಪ್ರತಿಬಂಧಕವಿರುತ್ತದೆ. ಮನುಷ್ಯನು ದೇಹದೊಂದಿಗೆ ಅಭೇದವಿಂದಿರುತ್ತಾನೆ.

ಈರೀತಿ ಮಾಯಾವಶೀಕೃತನಾದ ಮನುಷ್ಯನು ಅವಿದ್ಯಾವಂತನಾಗಿರುವಾಗ ಅವನಿಗೆ ಅನೇಕ ಪ್ರಕಾರದ ಸಂಶಯಗಳು ಸಂಕಲ್ಪ ವಿಕಲ್ಪಗಳು ಉಂಟಾಗುವುದೇ ಸ್ವಭಾವವಾಗಿದೆ. ಸ್ವಂತವಾಗಿ ವಿದ್ಯೆ ಇಲ್ಲದ್ದರಿಂದ ಇನ್ನೊಬ್ಬರು ಹೇಳಿದುದನ್ನು ನಂಬುವುದು ಸ್ವಾಭಾವಿಕವೇ. ಲೋಕದಲ್ಲಿ ಆಸ್ತಿಕ ನಾಸ್ತಿಕ ಜನಗಳು ಆತ ದೇವನು ಇದ್ದಾನೆ. ದೇವರು ಇಲ್ಲ. ದೇವನು ಒಬ್ಬನೇ. ಅನೇಕ ದೇವರು ಸಗುಣ ನಿರ್ಗುಣ ಸಾಕಾರ ನಿರಾಕಾರ ಹೀಗಿದ್ದಾನೆ. ಹಾಗಿಲ್ಲ. ಎಂದು ನಾನಾ ತರದ ವಾದವಿಕಲ್ಪಗಳನ್ನು ಒಡ್ಡುತ್ತಿರುತ್ತಾರೆ. ಸ್ವಂತ ಜ್ಞಾನವಿಲ್ಲದವನು ಅವರ ಮಾತುಗಳಿಂದ ಹೆಚ್ಚು ಹೆಚ್ಚು ವ್ಯಾಮೋಹಗೊಳ್ಳುವುದು ಕಂಡುಬರುತ್ತಿದೆ. ವಿಕಲ್ಪಿತವಾದ ಮತಗಳಿಂದ ಶ್ರೋತೃವಿಗೆ ಸಂದೇಹವೇ ಬೆಳೆಯುವುದು. ಮಹಾತ್ಮರ ಉಪದೇಶದಲ್ಲಿ ನಂಬಿಕೆಯುಂಟಾಗುವುದಿಲ್ಲ. ಈರೀತಿಯ ಅನೇಕ ಕಾರಣಗಳಿರುವುದು ಮನುಷ್ಯನಿಗೆ ಆತ್ಮಸ್ವರೂಪಾನುಭವಕ್ಕೆ ಪ್ರತಿಬಂಧಕವೇ ಇರುತ್ತೆ.

ಪ್ರಮಾಣದೌರ್ಲಭ್ಯವು ಪ್ರತಿಬಂಧಕವಾಗಿದೆ. ಪ್ರಮಾಣದಿಂದಲೇ ವಸ್ತು ಜ್ಞಾನವುಂಟಾಗುವುದಕ್ಕೆ. ಪ್ರಮಾಣವಿನಹ ನಿಶ್ಚಯ ಜ್ಞಾನವುಂಟಾಗಲಾರದು. ನಿಜಾತ್ಮನ ಜ್ಞಾನವುಂಟಾಗಲು ಪ್ರಮಾಣವು ಬೇಕೇ ಬೇಕು. ಆದರೆ ಅಂತಹ ಪ್ರಮಾಣವು ದುರ್ಲಭವಾಗಿದೆ. ಸ್ಥೂಲ ಇಂದ್ರಿಯಗಳು ಅಂತರಾತ್ಮನನ್ನು ತಿಳಿಯಲಾರವು ಪ್ರಮಾಣವೇ ಇಲ್ಲವೆಂದಲ್ಲ. ಇದ್ದೇ ಇದೆ. ಆದರೆ ಮನುಷ್ಯನಿಗೆ ಸುಲಭವಾಗಿಲ್ಲ. ರಹಸ್ಯವಾಗಿದೆ. ಉಪನಿಷತ್ ಉಪದೇಶಗಳೇ ರಹಸ್ಯ ವಸ್ತು ವಸ್ತುಜ್ಞಾನಕ್ಕೆ ~~ಶ್ರ~~ ಪ್ರಮಾಣಗಳಾಗಿವೆ. ಚಿತ್ತವಿಕ್ಷೇಪವುಳ್ಳವನಿಗೆ ಅವು ಸುಗಮವಾಗಿರುವುದಿಲ್ಲ. ಹಾಗು ಬ್ರಹ್ಮವಸ್ತುವು (ಪರೋಕ್ಷವೆಂಬಂತಾಗಿ) (ಅವಿದ್ಯಾವ್ಯವಧಾನವಿರುವುದರಿಂದ) ರಹಸ್ಯವಾಗಿದ್ದುಬಿಟ್ಟಿದೆ. ಬ್ರಹ್ಮಾತ್ಮನು ತಾನೇ ಅಪರೋಕ್ಷವಾಗಿದ್ದರೂ ಆತ್ಮವಿಸ್ಮೃತಿ, ಸ್ವರೂಪಾಜ್ಞಾನ, ಮತ್ತು ಮಿಥ್ಯಾಜ್ಞಾನವೆಂಬ ಅವಿದ್ಯೆ ಇರುತ್ತಿದ್ದು ಆ ಮೂಲಕ ಮಾಯೆಗೂ ಅಧೀನನಾಗಿರುವುದರಿಂದ ಮನುಷ್ಯನು ಕೃಪಣನಾಗಿಬಿಟ್ಟಿರುತ್ತಾನೆ. ಈ ಬಾಹ್ಯವ್ಯವಹಾರದೃಷ್ಟಿಯಿಂದ ಎಷ್ಟೇ ವಿದ್ಯಾವಂತನಾಗಿದ್ದರೂ

ಶ್ರೀ ಸಜ್ಜನರ ಸಹವಾಸ ಮತ್ತು ದೈವಭಕ್ತಿ ಇವು ಸಾಧನೆಗಳಲ್ಲಿ ಪ್ರಧಾನವಾಗಿರುತ್ತವೆ.

ಸ್ವಾತ್ಮ ವಿಷಯದಲ್ಲಿ ಕೇವಲ ಬಾಲಕನೇ ಸರಿ. ಬಾಲಕನಿಗೆ ವಸ್ತು ಮತ್ತು ಪ್ರಮಾಣಗಳ ಬಲ ತಿಳಿದಿರುವುದಿಲ್ಲವಷ್ಟೆ. ಹಾಗೆಯೇ ಅವಿದ್ಯಾಮಾಯಾವಶೀಕೃತನಾದ ಕೃಪಣನು ಯಾವುದನ್ನು ವಿಶ್ವಾಸದಿಂದ ಹಿಡಿಯಬೇಕು. ಯಾವುದನ್ನು ವರ್ಜಿಸಬೇಕು ಎಂಬುದನ್ನು ನಿಶ್ಚಯಿಸಲಾರದೆ ಅವ್ಯವಸ್ಥಿತಚಿತ್ತನಾಗಿರುತ್ತಾನೆ. ಸಾಮಾನ್ಯ ಜನರಂತೆ ಸಂಸಾರವನ್ನೇ ಅನುಸರಿಸುತ್ತಾನೆ. ಗುರು ವೇದಶಾಸ್ತ್ರ ಪ್ರಮಾಣದಲ್ಲಿ ಅಂತಹ ಸಾಮಾನ್ಯ ಮನುಷ್ಯನಿಗೆ ಶ್ರದ್ಧೆ ವಿಶ್ವಾಸವಿರುವುದಿಲ್ಲವಾದ್ದರಿಂದ ಪ್ರಮಾಣವು ದುರ್ಲಭವಾಗಿದೆ. ಈ ಪ್ರತಿಬಂಧಕವಿರುವುದರಿಂದಲೇ ಸ್ವಾತ್ಮಜ್ಞಾನವುಂಟಾಗುತ್ತಿಲ್ಲ.

ಈ ಅವಿಶ್ವಾಸಕ್ಕೆ ಸಾಧನೆಗಳು ಇಲ್ಲದುದೇ ಕಾರಣವಾಗಿದೆ. ಸಾಧನೆಗಳು ನಾಲ್ಕು. ನಿತ್ಯಾನಿತ್ಯವಸ್ತುವಿವೇಕ. ಶಮದಮಾದಿಗಳೆಂಬ ದೈವೀಸಂಪತ್ತು. ವೈರಾಗ್ಯ ಮತ್ತು ತಾನು ಮುಕ್ತನಾಗಬೇಕೆಂಬ ತೀವ್ರಾಭಿಲಾಷೆ. ಈ ನಾಲ್ಕು ಸಾಧನೆಗಳು ಇದ್ದರೆ ಗುರುವಚನದಲ್ಲಿ ವಿಶ್ವಾಸವು ಉಂಟಾಗುತ್ತದೆ. ಪಾಪಕರ್ಮಗಳು ಸವೆದಿದ್ದರೆ ಈ ಸಾಧನೆಗಳು ಬೆಳೆಯುತ್ತವೆ. ದುರಿತವು ಪ್ರಬಲವಾಗಿದ್ದರೆ ಸಾಧನೆಗಳು ಹುಟ್ಟಿ ಇರುವುದಿಲ್ಲ. ಪಾಪಕ್ಷಯ ಮೂಲಕ ಪುಣ್ಯ-ಧರ್ಮಾದಿಗಳು ಹೆಚ್ಚಿದಂತೆಲ್ಲ ಸಾಧನಸಿದ್ಧಿಯೂ ಆಗುವುದು. ಸಾಧನೆಯು ಸಿದ್ಧವಾದರೆ ಗುರುಲಾಭ, ಉಪದೇಶಗಳು ಶ್ರವಣ ಮನನಾದಿಗಳು ನಡೆದು ಸ್ವಾತ್ಮರಹಸ್ಯಗಳೆಲ್ಲ ತಿಳಿಯುವುವು. ಉತ್ಕೃಷ್ಟ ಜ್ಞಾನವು ಹುಟ್ಟುವದು ಸ್ವರೂಪಜ್ಞಾನವುಂಟಾಗುವುದು. ಆ ಜ್ಞಾನಜ್ಯೋತಿ ಉದಯವಾದ ಕೂಡಲೇ ತಮೋರೂಪವಾದ ಅವಿದ್ಯಾಮಾಯಾಪ್ರಭಾವಗಳೆಲ್ಲ ಅಡಗುವುವು. ಮೂಲಾಜ್ಞಾನವು ನಾಶಹೊಂದುವುದು. ಆಗ ಸ್ವಾತ್ಮದೇವನಲ್ಲಿ ನಿತ್ಯನಿವೃತ್ತವಾದ ಅವಿದ್ಯೆಯು ಆತ್ಯಂತಿಕವಾಗಿ ನಾಶಹೊಂದಿ ನಿತ್ಯಪ್ರಾಪ್ತವಾದ ತಾನೆ ತಾನಾದ ಬ್ರಹ್ಮಪ್ರಾಪ್ತಿ ಅಥವಾ ಮೋಕ್ಷವು ಕೈಗೂಡುವುದು. ಇದೇ ಶುದ್ಧಪರಮಾನಂದ = ಅಪರೋಕ್ಷಾನುಭವ.

ಈ ಮೇಲೆ ಅವಿದ್ಯಾಸ್ವರೂಪವನ್ನು ವಿವರಿಸುವಾಗ ಕಾರ್ಯಕಾರಣಭಾವಕ್ಕೊಳಗಾದುದು ಪರಸ್ಪರಾಶ್ರಯದೋಷವುಳ್ಳದ್ದಾಗಿದೆ. ನಾನು ದೇಹ ಎಂಬ ಜ್ಞಾನವು (ಅಜ್ಞಾನವು) ಪ್ರಮಾಣವಿಲ್ಲದೆ ಉಂಟಾಗುತ್ತಿದೆ ಎಂದದ್ದರಿಂದ ಕಾರ್ಯವು ಅಕಸ್ಮಾತ್-ಯಾದೃಚ್ಛಿಕ ಎನ್ನುವುದು ಲೋಕವಿರುದ್ಧವಲ್ಲ. ಪ್ರಾರಬ್ಧ ಎಂದು ಹೇಳಿ ಅವನಿಗೆ ಬಹುಮಾನವಿತ್ತ ಎಂದುದು

ಇತ್ಯಾದಿ ದೋಷಗಳನ್ನು ಹೇಳಬಹುದಾಗಿದೆಯಾದರೂ ಸಾರ್ವತ್ರಿಕಾನುಭವದ ಪ್ರಕಾರ (ನಾನು ದೇಹೀ, ನನ್ನ ಸ್ವರೂಪವನ್ನು ಅರಿಯೆ ಇತ್ಯಾದಿ ಜ್ಞಾನ) ಆತ್ಮಮಾಯಾ ಮಹಿಮೆ, ಅವಿದ್ಯೆಯ ಪ್ರಭಾವ ಎಂಬ ಒಂದು ಪ್ರಕ್ರಿಯೆಯನ್ನು ಗ್ರಹಿಸಿಕೊಂಡರೆ ಮೇಲಿನ ಆಕ್ಷೇಪದೋಷಗಳೆಲ್ಲವೂ ದೂರವಾಗುವುವು. ಮಾಯೆಯ ಸ್ವಭಾವವೇ ಹಿಂ ತಪ್ಪದು. ಅಚಿಂತ್ಯ ರಚನೆಯೇ ಮಾಯೆಯ ಸ್ವಭಾವವು. ಅದು ಈ ಲೋಕದಲ್ಲಿ ಕಂಡ ತರ್ಕಯುಕ್ತಿಗಳಿಗೆ ವಿರುದ್ಧವಾಗಿಯೇ ಕಾರ್ಯಗಳನ್ನುಂಟು ಮಾಡುವುದು. ಇಂತಹುದು ಸ್ವಪ್ನದಲ್ಲಿ ಮತ್ತು ಇಂದ್ರಜಾಲ ಸ್ಥಳಗಳಲ್ಲಿ ಅನುಭವಯೋಗ್ಯವಾಗುತ್ತಿದೆ. ಹಾಗೆಯೇ ವಿಶ್ವಮಾಯೆ ಎಂಬ ಆತ್ಮಮಾಯಾಪ್ರಕೃತಿಯು ಅವಿದ್ಯೆಯಿಂದಲೂ ಮನುಷ್ಯನಲ್ಲಿ ನಾನು ಎಂಬುದೇ ಮೊದಲಾದ ವಿಶ್ವ ಕಾಲ ದೇಶ ಕರ್ತೃ ಭೋಕ್ತೃ ಕಾರ್ಯ ಕರಣ ಸಾಧನ ಫಲ ಲೋಕ ವೇದನಾದಿಗಳನ್ನು ಉಂಟುಮಾಡುತ್ತಿರುವುದು. ಇಂತಹ ಅದ್ಭುತ ಶಕ್ತಿಯ ಮಾಯೆಯು ಮತ್ತು ಅವಿದ್ಯಾಶಕ್ತಿಯು (ಸ್ವರೂಪಾಜ್ಞಾನವು) ಅನಾದಿಯಾದುದು. ಅದರ ಆದಿಯು ತಿಳಿಯುವುದಿಲ್ಲ. ಅಜ್ಞಾನದಿಂದಲೇ ಅಜ್ಞಾನಕ್ಕೆ ಸಿದ್ಧಿಯಾಗುವುದು ಮಾಯೆಯಿಂದಲೇ ಮಾಯೆಗೆ ಸಿದ್ಧಿಯಾಗುತ್ತಿರುವುದು. ಇದೇ ಆತ್ಮದೇವನ ಪ್ರಕೃತಿಯು.

ಈ ಚಿಂತನೆಗೆ ಪೂರಕವಾಗಿ ಜಗತ್ಸೃಷ್ಟಿಯನ್ನು ಮತ್ತು ಈಶ್ವರನು ಈ ಸೃಷ್ಟಿಯಲ್ಲೆಲ್ಲಾ ತುಂಬಿಕೊಂಡಿರುತ್ತಾನೆಂಬ ಪ್ರವೇಶ ಪ್ರಕ್ರಿಯೆಯನ್ನು ಅನುಸಂಧಾನ ಮಾಡಿಕೊಳ್ಳಬೇಕು. ಹಾಗು ಮಾಯಾವಿಲಾಸವೆಂಬ ಆತ್ಮದೇವನ ಲೀಲೆಯನ್ನು ನೆನೆದುಕೊಳ್ಳಬೇಕು.

ಅವಿದ್ಯಾ ಪರಿಚಯ

ಸ್ವಸ್ವರೂಪ ಜ್ಞಾನವಿಲ್ಲದ ಮನುಷ್ಯನು ನಾನು ದೇಹ ಎಂದು ಬಗೆಯುತ್ತಿರುತ್ತಾನೆ. ನಾನು, ನನ್ನ ದೇಹ ಎಂದು ತಿಳಿಯುತ್ತಾನೆ. ಮತ್ತ ಹಾಗೆಯೇ ಹೇಳುತ್ತ ವ್ಯವಹರಿಸುತ್ತಾನೆ ನಾನು ನನ್ನ ನಿಜವನ್ನು ಅರಿಯದವನಾಗುತ್ತಾನೆ. ಆದರೆ, ಇವೆಲ್ಲವೂ ಅನುಭವರೂಪವೇ ಆಗಿದ್ದರೂ ಇದು ಭ್ರಮೆಯೆನಿಸಿದೆ. ಈಗ ಈಗ ನೆನಪಿಸಿಕೊಂಡಂತೆ ತೋರಿದರೂ ಸ್ಮೃತಿ ಎನ್ನುವಂತಿಲ್ಲ. ಈ ಹಿಂದೆ ಎಂದೂ ತನ್ನನ್ನಾಗಲೀ ತಾನು ದೇಹವಿಶಿಷ್ಟ ಎಂದಾಗಲೀ ಪ್ರಮಾಣಪೂರ್ವಕ ಪ್ರಯತ್ನದಿಂದ ಮನುಷ್ಯನು ಅನುಭವಿಸಿಲ್ಲ. ಅದಕ್ಕೆ ತಕ್ಕ ಪ್ರಮಾಣವೂ ಇರುವುದಿಲ್ಲ. ಆದಾಗ್ಯೂ ಈ ತಪ್ಪುತಿಳುವಳಿಕೆ ಎಂಬ ಇತಿಹಾಸ ಪ್ರವಾಹದಂತೆ ಎಂದೋ ಹೇಗೋ ಹುಟ್ಟಿಕೊಂಡು ಬರುತ್ತಾ ಇರುತ್ತದೆ. ಇಂದ್ರಿಯಾರ್ಥಸನ್ನಿಕರ್ಷವಿರತಕ್ಕೆ ಇದು ಘಟ ಎಂಬ ಜ್ಞಾನದಂತೆ ಇದು ಹೊಸದಾಗಿ ಹುಟ್ಟುವುದಿಲ್ಲ. ಅಥವಾ ರಜ್ಜು ಸರ್ಪ ಎಂಬಂತೆ ಭ್ರಾಂತಿಯೂ ಆಗಿಲ್ಲ. ಏಕೆಂದರೆ: ಇಂದ್ರಿಯಾರ್ಥಸನ್ನಿಕರ್ಷ ವಿದೋಷ... ನಾನು ಎಂಬಲ್ಲಿ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೆಂಬ ಅಧ್ಯಾಸವಿರುವಂತೆ ಭ್ರಾಂತಿಯಲ್ಲಿ ಪರಸ್ಪರಾಧ್ಯಾಸವಿರುವುದಿಲ್ಲ. ಮುಖಚಂದ್ರ ಎಂಬಂತೆ ಬಾಧಸಮಾನಕಾಲೀನ ಜನ್ಯವಾದ ಆಹಾರ್ಯಜ್ಞಾನವೂ ಇಲ್ಲ. ಮತ್ತೆ ಕಲ್ಪನಕರ್ತೃಭೇದವಿಲ್ಲದ್ದರಿಂದ ಬೌದ್ಧವಾದಿಗಳು ಹೇಳುವಂತಹ ಜ್ಞಾನವೂ ಇಲ್ಲ. ಅಧ್ಯಾತ್ಮಶಾಸ್ತ್ರಸಮ್ಮತವಾದ ಈ ಅಧ್ಯಾಸವು ಪ್ರಮಾಣವಿಲ್ಲದೇ ಅಪರೋಕ್ಷವಾಗಿ ಸರ್ವರಿಗೂ ಉಂಟಾಗುತ್ತಿರುವ ಈ ನಾನು ಎಂಬ ಅನುಭವವು ದಿಗ್ಭ್ರಮೆಯಂತೆ ಉಂಟಾಗಿರುವುದು. ಭ್ರಮರೂಪ ಅಥವಾ ಸಾಮಾನ್ಯಜ್ಞಾನವಾಗಿದೆ. ವಿಶೇಷಜ್ಞಾನವು ಅಥವಾ ನಿರ್ಣಯರೂಪವಾಗಿರುವುದಿಲ್ಲ. ಅಧ್ಯಾಸವಿಲ್ಲದೇ ವಿಶೇಷಜ್ಞಾನವುಂಟಾಗುವುದಿಲ್ಲ. ಭ್ರಮೆ ಇಲ್ಲದೇ ನಾನು ನನ್ನದು ಎಂಬ ಜ್ಞಾನ ಹುಟ್ಟುವುದಿಲ್ಲ. ನಿದ್ರೆಯ ಕಾಲದಲ್ಲಿ ನಿರ್ವಿಶೇಷಸ್ಥಿತಿಯುಂಟಿರುತ್ತದೆ. ಅಧ್ಯಾಸವಿರುವುದಿಲ್ಲ. ಆಗ ವ್ಯವಹಾರವೂ ಇಲ್ಲ. ವಿಶೇಷಜ್ಞಾನವೂ ಇಲ್ಲ. ಎಚ್ಚರದಲ್ಲಿ ದೇಹಾತ್ಮಾಧ್ಯಾಸದಿಂದಿರುತ್ತಾನೆ ವಿಶೇಷಜ್ಞಾನವುಂಟಾಗುತ್ತದೆ ಆಗ ನಾನು ಕರ್ತೃ ಭೋಕ್ತೃ ಪ್ರಮಾತಾ ಪ್ರಮೇಯ ಕಾರ್ಯ ಕಾರಣ ಇತ್ಯಾದಿ ವಿಭಾಗ ವ್ಯವಸ್ಥೆಗಳೆಲ್ಲ ಇರುವುವು. ಆದ್ದರಿಂದಲೇ ಈ ಅಧ್ಯಾಸವನ್ನು ಕರ್ತೃಭೋಕ್ತೃಪ್ರವರ್ತಕವೆಂದು ಹೇಳುತ್ತಾರೆ. ಇಲ್ಲದೆ ಕಾಲದಲ್ಲಿ ಎಚ್ಚರ ಕಾಲದಲ್ಲಿ ಸ್ವಪ್ನ. ಮತ್ತ ನಿದ್ರೆ ಎಂದು ತಿಳಿಯುವುದೂ ಸರಿಯಲ್ಲ. ಏಕೆಂದರೆ ಅಧ್ಯಾಸವಿಲ್ಲದೇ ಕಾಲವೇ ಸ್ಥಿತಿಯಿರುವುದಿಲ್ಲ. ಎಚ್ಚರದಲ್ಲಿ ಕಾಲ. ಸ್ವಪ್ನದಲ್ಲಿ ಕಾಲ. ಹೀಗೆ ಬೇರೆಬೇರೆ ಕಾಲಗಳ ಬೇರೆಬೇರೆ ಸ್ಥಿತಿಯನ್ನು ಆತ್ಮನೇ

ಅವಸ್ಥೆಯಲ್ಲಿರುವ ಮನುಷ್ಯನೇ ಕಾಣುತ್ತಿರುತ್ತಾನೆ. ಆದ್ದರಿಂದ ಅವಸ್ಥೆಯಲ್ಲಿ ಕಾಲವೇ ಬೇರೆ, ಸ್ವಪ್ನದ ಕಾಲದಲ್ಲಿ ಅವಸ್ಥೆ ಎನ್ನುವುದು ತಪ್ಪುತಿಳುವಳಿಕೆಯಾಗಿದೆ. ಅವಸ್ಥಾಕಲ್ಪಿತವಾದ್ದರಿಂದಲೇ ಕಾಲಕ್ಕೆ ಸ್ವತಂತ್ರವಾದ ಸತ್ತೆಯೇ ಇಲ್ಲ. ಅದು ಮಾಯಿಕವಾದದ್ದು. ಅವಸ್ಥಾವತ್ಪುರುಷನ ಸತ್ತೆಯಿಂದಲೇ ಸತ್ತೆಯನ್ನು ಪಡೆದುಕೊಂಡಿರುವಂತಹ ಸ್ವಪ್ನದಂತೆ ಕಾಲಪ್ರತೀತ ಮಾಯೆಯದ್ದಾಗಿದೆ.

ಮೇಲೆ ಹೇಳಿದಂತೆ ನಾನು ಎಂಬ ಅನುಭವವು ಅಧ್ಯಾಸವಾಗಿದ್ದು ಅದು ಸ್ಮೃತಿಯಲ್ಲ. ಭ್ರಾಂತಿಯಲ್ಲ. ಅದಾಗ್ಯೂ ಜ್ಞಾನವಲ್ಲ. ಇದು ಜ್ಞಾನಸ್ವರೂಪವಾದ ಅವಿದ್ಯೆಯಾಗಿದೆ. ಅಭಾವರೂಪವಲ್ಲ. ಅನುಭವ ಎಂದದ್ದರಿಂದಲೇ ಭಾವರೂಪ ಎಂದು ಹೇಳಿದಂತಾಯಿತು. ಈ ಅವಿದ್ಯೆ ಎಂಬ ಭಾವರೂಪಾಜ್ಞಾನವು ಅಪರೋಕ್ಷವಾಗಿದೆ. ಇದರ ಪ್ರಮಾಣದಿಂದ ಉಂಟಾದುದಲ್ಲ, ಬೇರೆ ಕಾರಣವಿಲ್ಲದ್ದರಿಂದಲೇ ಕಾರ್ಯರೂಪವಲ್ಲ. ಅಪ್ರಾಮಾಣಿಕವಾದದ್ದರಿಂದಲೇ ತಪ್ಪುತಿಳುವಳಿಕೆಯಾಗಿದೆ. ಭ್ರಮಾರೂಪವಾಗಿದೆ. ಪರಮಾರ್ಥಜ್ಞಾನವೆಂಬ ವಿಜ್ಞಾನಾನುಭವವಾಗಿಲ್ಲ. ನಾನು ನನ್ನದು ಎಂಬ ಮಿಥ್ಯಾಜ್ಞಾನಕ್ಕೆ ಸ್ವರೂಪಾಜ್ಞಾನದಿಂದಾದ ಆತ್ಮವಿಸ್ಮೃತಿಯೇ ಮೂಲಕಾರಣವಾಗಿರುತ್ತೆ. ಇವೆರಡೂ ಒಂದೇ ಆಗಿರುತ್ತವೆಂದೇನೂ ವ್ಯವಸ್ಥೆಯಿಲ್ಲ. ಮಿಳಿತವಾಗಿಯೇ ಅಕ್ರಮ ವ್ಯತ್ಯಾಸವಾಗಿಯೂ ಸಮಸಮವಾಗಿಯೂ ಉಂಟಾಗುತ್ತವೆ. ಒಟ್ಟಿನಲ್ಲಿ ಒಟ್ಟಾಗಿರುವ ಈ ತಮೋರೂಪದ ಅಜ್ಞಾನರಾಶಿಗೆ ಅವಿದ್ಯೆ ಎನ್ನುತ್ತಾರೆ. ಅವಿದ್ಯಾ ಮನಸ್ವರೂಪವಾಗಿ ತಮೋರೂಪವಾಗಿರುವ ಈ ಆವರಣಾಶಕ್ತಿಯ ಹೆಚ್ಚಿನ ಪರಿಚಯಕ್ಕಾಗಿ ಶಾಸ್ತ್ರದಲ್ಲಿ ವಿಚಾರಮಾಡಲಾಗಿದೆ. ಮನುಷ್ಯನಿಗೆ ಪ್ರಮಾಣವೇ ಇಲ್ಲದೇ ನಾನು ನನ್ನದು ಎಂಬ ಮಿಥ್ಯಾಜ್ಞಾನ ಅಥವಾ ಅಧ್ಯಾಸವು ಏತಕ್ಕೆ ಉಂಟಾಗುತ್ತಿದೆ? ಎಂದು ಪ್ರಶ್ನಿಸಿಕೊಂಡು ಸಮಾಧಾನಕ್ಕಾಗಿ ಹೇಳುತ್ತಾರೆ:- ಸ್ವಸ್ವರೂಪ ಜ್ಞಾನವಿರುವುದಿಲ್ಲ. ಅಂದರೆ ಅಜ್ಞಾನವಿರುತ್ತದೆ. ಆದ್ದರಿಂದ ತಪ್ಪುತಿಳುವಳಿಕೆಯುಂಟಾಗುತ್ತದೆ. ಈ ಅಜ್ಞಾನವೇತಕ್ಕಿರುತ್ತದೆ? ಎಂದರೆ ಆತ್ಮಸ್ಮರಣೆಯಿಲ್ಲದವನಾಗಿರುತ್ತಾನೆ ಅಂದರೆ ವಿಸ್ಮೃತಾತ್ಮನಾಗಿರುತ್ತಾನೆ. ಇದರಿಂದ ಆತ್ಮಾಜ್ಞಾನವಿರುತ್ತದೆ ಎಂದು ಸಮಾಧಾನವಿರುತ್ತೆ. ಈ ರೀತಿ ಸ್ವರೂಪಾಜ್ಞಾನ ಆತ್ಮವಿಸ್ಮೃತಿ ಮಿಥ್ಯಾಜ್ಞಾನವೆಂಬ ಭ್ರಮೆ ಈ ಒಟ್ಟು ರಾಶಿಯು ಆತ್ಮಪ್ರಕೃತಿಯ ಆವರಣಾಶಕ್ತಿರೂಪವಾಗಿದೆ. ಇದರಿಂದಲೇ ಮುಂದಿನ ವಿಕ್ಷೇಪಶಕ್ತಿ ಎಂಬ ಈಶ್ವರಪ್ರಕೃತಿಯ ಕಾರ್ಯವಾಗಿ ಕರ್ತೃ ಭೋಕ್ತೃ ವ್ಯವಹಾರಗಳು ಬೆಳೆದು ಸಂಸಾರವಾಗುವುದು.

ವ್ಯವಹಾರ – ಅವಿದ್ಯಾತ್ಪರಂಪರೆಯಿಂದ ಬಂದುದು ಅವಿಚಾರಿತ ಸಿದ್ಧವಾದುದು (ಅಕಸ್ಮಿಕ)
ಪರಮಾರ್ಥ – ವಿಚಾರಪೂರ್ವಕವಾಗಿ ಶ್ರುತಿಯುಕ್ತಿಅನುಭವಗಳಿಂದ ನಿರ್ಣಯಮಾಡಿಕೊಂಡುದು.

ವಿದ್ವಾಂಸನ ಜೀವನ ದರ್ಶನ

ತತ್ತ್ವಸ್ವರೂಪಗಳನ್ನು ಚೆನ್ನಾಗಿ ಪರೀಕ್ಷಿಸಿಕೊಂಡು ಸಮ್ಯಗ್ಜ್ಞಾನವಮಾಡಿಕೊಂಡಿರುವ ವಿವೇಕಿಯು ಮೋಹನಿದ್ರೆಯಿಂ ಬಿಟ್ಟು ಪ್ರಬೋಧವುಳ್ಳವನಾಗಿರುತ್ತಾನೆ. ಸ್ವಂತ-ಅಂತರ ವಿಷಯಗಳಲ್ಲಿ ಮತ್ತು ಈ ಬಾಹ್ಯ ಜಗದ್ವ್ಯವಹಾರಗಳಲ್ಲಿ ಎಚ್ಚರವಹಿಸಿಕೊಂಡಿರುತ್ತಾನೆ. ಅಂದರೆ ವ್ಯವಹಾರ ಮತ್ತು ಪರಮಾರ್ಥಗಳ ಮರ್ಮವು ಅವನಿಗೆ ತಿಳಿದಿರುತ್ತದೆ. ಅವನಿಗೆ ಜಗನ್ಮಿಥ್ಯಾ ಎಂದು ಮನವರಿಕೆಯಾಗಿರುವುದರಿಂದ ಅವನು ವ್ಯವಹಾರದಲ್ಲಿ ಆಸಕ್ತವಹಿಸುವುದಿಲ್ಲ. ಅನಾಸಕ್ತನಾಗಿರುತ್ತಾನೆ. ರತಿಯಿಂದಿರುವುದಿಲ್ಲ. ಉಪರತನಾಗಿರುತ್ತಾನೆ. ಅನುರಕ್ತನಾಗಿ ಕುಕ್ಕಿಸುವುದಿಲ್ಲ. ವಿರಕ್ತನಾಗಿ ಉಪೇಕ್ಷೆಯಿಂದಿರುತ್ತಾನೆ. ಯಾವ ಉದ್ವೇಗಕ್ಕೂ ಒಳಗಾಗದೆ ಸಮಾಧಾನ ಸಮಶಾಂತನಾಗಿರುತ್ತಾನೆ. ನಿರ್ಗುಣ ನಿರ್ವಿಕಾರಿ ಬ್ರಹ್ಮಾತ್ಮಸ್ವರೂಪವನ್ನು ಮತ್ತು ಮಾಯೆಯಿಂದಾದ ಜಗತ್ಕಾರ್ಯಗಳನ್ನು ನೋಡುತ್ತಿದ್ದರೂ ಜ್ಞಾನಿಯು (ಅಧ್ಯಾರೋಪ-ಅಪವಾದ) ಉಭಯತ್ರ ಕುಶಲನಾಗಿರುವುದರಿಂದ ಮೃತ್ತುಘಟಗಳಿರುವಂತೆ, ಜಲಬುದ್ಬುದಗಳಿರುವಂತೆ, ಕ್ಷೀರದಧಿಗಳಿರುವಂತೆ, ರಜ್ಜುಸರ್ಪಗಳಿರುವಂತೆ ಕಾರ್ಯಕಾರಣಾಭಾವಗ್ರಹಣೆಯೊಂದಿಗೆ ಮೂಲಕಾರಣಾಮಾತ್ರವೇ ಸತ್ಯವು ಕಲ್ಪಿತವಾದುದು ಮಿಥ್ಯೆ ಎಂದು ನಿಶ್ಚಯಮಾಡಿಕೊಂಡಿರುತ್ತಾನೆ. ಮತ್ತು ಕಲ್ಪಿತ ಜಗತ್ಕಾರ್ಯಗಳಲ್ಲಿ ಬ್ರಹ್ಮವಿವರ್ತವೆಂದರಿಯುತ್ತಾ ಸರ್ವತ್ರ ಬ್ರಹ್ಮದರ್ಶನವೆಂಬ ಅಭೇದಾನುಭವದಿಂದ ಕೃತಕೃತ್ಯನಾಗಿರುತ್ತಾನೆ. ದ್ವೈತಭಾಷೆ ಅದ್ವೈತಭಾಷೆ ಇವೆರಡೂ ಅವನಿಗೆ ಅರ್ಥವಾಗಿರುತ್ತೆ.

ಅಜ್ಞಾನಿಯ ಪಾಮರ ಜೀವನ

ಬ್ರಹ್ಮಜಿಜ್ಞಾಸೆ ಮಾಡಿಕೊಳ್ಳದ ಅವಿವೇಕಿಯಾದವನಿಗೆ ಸರ್ವತ್ರ ಸಮದರ್ಶನವೆಂಬ ಅಭೇದಾನುಭವವಾಗಲಾರದು. ಏಕೆಂದರೆ ಮೂಲವಾದ ಸದ್ವಸ್ತುವೇ ತಿಳಿಯದಿರುವುದರಿಂದ ಈಶ್ವರ ಜೀವ ಜಗತ್ತು ಇವುಗಳಲ್ಲಿ ~~[illegible]~~ [illegible]ರುವ ಕಾರ್ಯಕಾರಣಾಭಾವವೇ ಅವನಿಗೆ ಗೊತ್ತಾಗುವುದಿಲ್ಲ. ಮತ್ತು ಅಂತರದಲ್ಲಿ ಆತ್ಮಾನಾತ್ಮಸ್ವರೂಪಗಳನ್ನು ನಿಶ್ಚಯಮಾಡಿಕೊಂಡಿರುವುದಿಲ್ಲವಾದ್ದರಿಂದ ಅಜ್ಞಾನಿಗೆ ನಾನು ನನ್ನದು ಎಂಬ (ಸ್ವಾಭಾವಿಕ ಜೀವ=ಶರೀರಾನುಭವ) ಅನುಭವವು ತಪ್ಪುವುದಿಲ್ಲ. ಹಾಗು (ಮಾಯಾಕಾರ್ಯವಾದ) ದೇಹಾದಿಸಂಘಾತದಲ್ಲಿ ಆತ್ಮತಾದಾತ್ಮ್ಯಯೇ – ಅಧ್ಯಾಸವೇ ಹುಟ್ಟುಗಟ್ಟಿಕೊಂಡಿರುತ್ತದೆ.

ಅಧ್ಯಾರೋಪ-ಅಪವಾದ ಪ್ರಕ್ರಿಯೆ ಎಂಬ ಉಪಾಯವನ್ನು ತಿಳಿದಿರುವುದಿಲ್ಲ. ಆದ್ದರಿಂದ ಅವನ ಅಂತರದಲ್ಲಿ ನಾನು ನನ್ನದು ಎಂದೂ ಬಾಹ್ಯದಲ್ಲಿ ನಾನಾಬಗೆಯ ಭ್ರಾಂತಿಕವಸ್ತುಗಳೆಂದು ಅವು ಸತ್ಯವೆಂದು ನಂಬಿಕೊಂಡು ವ್ಯವಹಾರದಲ್ಲಿ ಮುಳುಗಿರುತ್ತಾನೆ. ಅಂದರೆ ಅವನಿಗೆ ಅಧ್ಯಾಸವಿರುವುದರಿಂದಲೇ ರಜ್ಜುಸರ್ಪ, ಮರುಜಲ, ಆಕಾಶನೀಲ ಎಂಬ ರೀತಿಯ ಯಥಾರ್ಥವಲ್ಲದ ಮಿಥ್ಯಾಜ್ಞಾನವೇ ಉಂಟಾಗುತ್ತಿರುತ್ತದೆ. ಈ ತಪ್ಪು ತಿಳುವಳಿಕೆಯಿಂದ ಸ್ವವಿಷಯದಲ್ಲಿ ಕರ್ತೃ ಭೋಕ್ತೃ ಸಂಸಾರಿತ್ವಾದಿ ಭ್ರಮೆಯೂ ಬಾಹ್ಯವ್ಯವಹಾರದಲ್ಲಿ ರಾಗದ್ವೇಷಗಳ ಮೂಲಕ ಭೇದಬುದ್ಧಿಯೂ ನಿರಂತರವಾಗಿ ಉಂಟಾಗುತ್ತಲೇ ಇರುತ್ತದೆ. ಇದಕ್ಕೆ ಅಂತ್ಯವೇ ಇಲ್ಲ.

ಆತ್ಮದೇವನ ಶಾಶ್ವತ ಶಕ್ತಿಯಾದ ಅವಿದ್ಯಾ ~~ಮಾಯೆ~~ ಪ್ರಭಾವವೇ ಇದು. ಆತ್ಮದೇವನ ಶುದ್ಧ ಸತ್ತ್ವ ಪ್ರಕೃತಿಯಾದ ಮಾಯಾಶಕ್ತಿಯ ಮಹಿಮೆಯೇ ಇದು. ಮಾಯೆಯ ಸ್ವಭಾವವೇನೆಂದರೆ:- ವಿರುದ್ಧಕಾರ್ಯೋತ್ಪತ್ತಿ ಮತ್ತು ವಿರುದ್ಧದರ್ಶನ ಮಾಡಿಸುವುದೇ ಮಾಯಾಸ್ವಭಾವ. ದೇಹ ಪುತ್ರ ವಿತ್ತಾದಿಗಳು ಅನೃತ ಜಡದುಃಖರೂಪವಾಗಿದ್ದರೂ ಅವನ್ನು ಸತ್ಯ ಚೇತನ ಸುಖ ಎನ್ನುವಂತೆ ಪ್ರದರ್ಶಿಸುವುದು. ಅಂತರಾತ್ಮನು ಸತ್ಯ ಚಿನ್ಮಯಾನಂದನಾಗಿ ಇರುತ್ತಿದ್ದರೂ ಸ್ವಸ್ವರೂಪವು ಪ್ರಕಟವಾಗದಂತೆ ಮರೆಮಾಡಿಸುವುದು ಜೀವನೇ ಇಲ್ಲವೆಂಬ ಭಾವನೆಯನ್ನುಂಟುಮಾಡುವುದು ಇದೇ ಅವಿದ್ಯಾಮಾಯಾ ಕಾರ್ಯವು. ಆಗ ಆತ್ಮದ್ರೋಹಿಗಳಾದ ವ್ಯವಹಾರಿಗಳಿಗೆ ದ್ವೈತಭಾಷೆ ಅಂದರೂ ಅರ್ಥವಾಗುವುದಿಲ್ಲ. ಅದ್ವೈತಭಾಷೆ ಎಂದರೇನು? ಎಂಬುದು ಗೊತ್ತಾಗುವುದಿಲ್ಲ.

ಅಜ್ಞಾನಿಯಾದ ಮನುಷ್ಯನ ದೃಷ್ಟಿಯಿಂದ ತನ್ನ ಆತ್ಮನೇ (ಅಪರೋಕ್ಷವಸ್ತುವೇ) ಪರೋಕ್ಷನು ಈಶ್ವರ, ಎಲ್ಲಿಯೋ ಹೊರಗೆ ಇರುವನೋ ಇಲ್ಲವೋ ಎಂದಾಗುವನು.

ಜ್ಞಾನಿಯ ದೃಷ್ಟಿಯಿಂದ ಪರೋಕ್ಷನಾದ ಈಶ್ವರನೇ ಬ್ರಹ್ಮಾತ್ಮನೆಂಬ ಅಪರೋಕ್ಷವಸ್ತು ಎಂದಾಗಿರುವನು.

ಶಾಸ್ತ್ರೋಪದೇಶವು ಬಹು ಕಠಿಣ ಕಾರ್ಯ.

ನಿದ್ರಿಸುತ್ತಿರುವ ಮನುಷ್ಯನನ್ನು ಸುಲಭವಾಗಿ ಎಬ್ಬಿಸಬಹುದು. ಅದಕ್ಕೇನೂ ವಿಶೇಷ ಯುಕ್ತಿ ಕಲ್ಪನೆಗಳನ್ನು ಒತ್ತಬೇಕಾಗುವುದಿಲ್ಲ. ಆದರೆ ನಿದ್ರೆಯ ಸೋಗು ಹಾಕಿಕೊಂಡು ಮಲಗಿದವನನ್ನು ಎಬ್ಬಿಸುವುದು ಸುಲಭವೇ? ಇಲ್ಲ. ಅದು ತುಂಬಾ ಪ್ರಯಾಸದ ಕಾರ್ಯವೇ. ಏಕೆಂದರೆ ಹಾಗೆ ಮಲಗಿದವನಿಗೆ ಏಳಬಾರದೆಂಬ ಕಡೆಗೇ ಹೆಚ್ಚು ಪ್ರಯತ್ನವಿರುತ್ತದೆ. ಅಂತಹವನನ್ನು ಎಬ್ಬಿಸಿ ಅವನನ್ನು ಹೆಚ್ಚಿನ ಯೋಗಕ್ಷೇಮಕ್ಕೆ ಸೇರಿಸಬೇಕೆಂದಿರುವ ಹಿತೈಷಿಯು ಅನೇಕಾನೇಕ ಯುಕ್ತಿಗಳನ್ನು ನ್ಯಾಯಗಳನ್ನು ಉದಾಹರಿಸಬೇಕಾಗುತ್ತದೆ. ತರತರದ ಹೊಸಹೊಸ ಕಲ್ಪನೆಗಳನ್ನು ಒತ್ತಬೇಕಾಗುತ್ತದೆ. ಹೀಗೆ ಉಪಾಯಗಳನ್ನು ಹಿಡಿದೇ ಎಬ್ಬಿಸಬೇಕಾಗುವುದೆಂದು ಲೋಕದಲ್ಲಿ ಕಂಡಿದೆಯಷ್ಟೆ. ಹಾಗೆಯೇ ಶಾಸ್ತ್ರವೂ ಮತ್ತು ಗುರುವೂ ಸಹ ಬಹು ಪ್ರಯಾಸದಿಂದ ಜೀವಪುರುಷನನ್ನು ಪ್ರಬೋಧಗೊಳಿಸುವರು. ವ್ಯವಹಾರ-ಪೂರ್ವಕರ್ಮ ಸಂಸ್ಕಾರಗಳು ರೂಢಮೂಲವಾಗಿರುವ, ಪರಂಪರೆಯಿಂದ ಕರ್ತೃ ಭೋಕ್ತೃ ನಂಬಿಕೆಯುಳ್ಳ ಶಿಷ್ಯನನ್ನು ಮೋಹನಿದ್ರೆಯಿಂದ ಎಚ್ಚರಪಡಿಸಬೇಕು. ಆ ಶಿಷ್ಯನೋ ತಾನು ಪ್ರಪಂಚ ವ್ಯವಹಾರವನ್ನೆಲ್ಲಾ ಬಲ್ಲವನು. ಪ್ರಬುದ್ಧನು. ವಿದ್ಯಾಪ್ರವೀಣನು. ಪ್ರಮಾತೃವಾದ ತಾನು ಪ್ರಮಾಣಗಳ ಸಹಾಯದಿಂದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ತಿಳಿದುಕೊಳ್ಳಬಲ್ಲೆ ಎಂದು ಬಗೆಯುತ್ತಿರುವನು. ಅವನಿಗೆ ಲೌಕಿಕವಾದ ಅನೇಕ ನ್ಯಾಯನೀತಿಗಳೂ ತಿಳಿದಿರುತ್ತವೆ. ತಾನೂ ಒಬ್ಬ ಪ್ರಾಮಾಣಿಕ ವಿವೇಕಿ ಎಂಬ ಅಭಿಮಾನವೂ ಅಭಿನಿವೇಶವೂ ಇರಬಹುದು. ಅಂತಹ ಶಿಷ್ಯಜಿಜ್ಞಾಸುವಿಗೆ ಪ್ರಮಾಣಾತೀತವಾದ ಪರಮಾರ್ಥತತ್ತ್ವವನ್ನು, ಅವನ ನಿಜಾತ್ಮಸ್ವರೂಪವನ್ನು ತಿಳಿಸಿಕೊಡಬೇಕಲ್ಲವೆ! ಮತ್ತು ಆ ಅಂತರಾತ್ಮನನ್ನು ಸಾಕ್ಷಾದಪರೋಕ್ಷವಾಗಿ ಅನುಭವಕ್ಕೆ ತಂದುಕೊಡಬೇಕು. ಇದು ಎಷ್ಟು ಕಠಿಣವಾದ ಕೆಲಸ! ಅಯ್ಯಾ ಶಿಷ್ಯನೇ, ನೀನು ಅಜ್ಞಾನಿ. ಅನಾದ್ಯಜ್ಞಾನದಿಂದಲೂ ಮೋಹದಿಂದಲೂ ಕೂಡಿದ್ದು ಮಾಯಾನಿದ್ರೆಯಲ್ಲಿ ಜಗತ್ಸ್ವಪ್ನವನ್ನು ಕಾಣುತ್ತಿರುವೆ. ಇದು ತಪ್ಪು

 ಎಂದು ನೇರವಾಗಿ ಹೇಳಿದರೆ ಅವನು ನಂಬುವುದಿಲ್ಲ; ಅಷ್ಟು ಸುಲಭವಾಗಿ ಒಪ್ಪುವುದಿಲ್ಲ. ಮತ್ತು ಆ ಮಾತುಗಳ ಅರ್ಥವೂ ಅವನಿಗೆ ತಿಳಿಯುವುದಿಲ್ಲ. ಮನುಷ್ಯನಿಗೆ ಪ್ರತ್ಯಕ್ಷಾದಿ ಪ್ರಮಾಣಗಳಿಂದಲೇ ವಸ್ತುಜ್ಞಾನಮಾಡಿಕೊಳ್ಳುವುದು ಅಭ್ಯಾಸವಾಗಿಬಿಟ್ಟಿರುತ್ತದೆ. [ಜಗದ್ರೂಪಗಳು ಕಾರಣಾನ್ತರವಾಗಿ ಹೊಸ್ತದೇ ಕಂಡುಬರುತ್ತವೆ] ಇಂದ್ರಿಯಾದಿಗಳ ಸಹಾಯವಿಲ್ಲದೆ ಬೇರರೀತಿಯಿಂದ ತಿಳಿಯುವುದು ಎಂದರೆ ನಂಬುದೇ ಗೊತ್ತಾಗುವುದಿಲ್ಲ. ಅಪರೋಕ್ಷಾನುಭವ ಎನ್ನುವುದರಲ್ಲಿ ಅವನಿಗೆ ವಿಶ್ವಾಸವೇ ಮೂಡುವುದಿಲ್ಲ. ಹೀಗೆ ಮಂದನಾಗಿರುವ ಜಿಜ್ಞಾಸುವಿನ ಮೇಲೆಯೂ ಕರುಣೆಯುಳ್ಳ ಶಾಸ್ತ್ರಾಚಾರ್ಯರು ಉಪದೇಶಮಾಡುವಾಗ ನಾನಾ ಉಪಾಯಗಳನ್ನು ಹಿಡಿದಿರುತ್ತಾರೆ. ಲೋಕವ್ಯವಹಾರದಲ್ಲಿರುವ ಕಾರ್ಯಕಾರಣಭಾವ. ಪ್ರಮಾಣಪ್ರಮೇಯಪ್ರಕ್ರಿಯೆ. ಯುಕ್ತಿ. ನ್ಯಾಯ ಮುಂತಾದ ಸರಣಿಯನ್ನೇ ಅನುಸರಿಸಿ ಬೋಧಿಸಲಾಗಿದೆ. ದ್ವೈತವ್ಯವಹಾರವನ್ನು ಒಪ್ಪಿಕೊಂಡು ಉಪದೇಶಿಸಲಾಗಿದೆ. ದ್ವೈತವಾದಿಯಂಥವರಿಗೆ ಗ್ರಹಣೆಯಾಗಲೆಂದೇ ಹಾಗೆ ಹೇಳಿದೆಯಷ್ಟಲ್ಲದೆ ಅವನ್ನೆಲ್ಲಾ ತಾತ್ಪರ್ಯದಿಂದೇನೂ ಸ್ಥಾಪಿಸಿರುವುದಿಲ್ಲ. ವ್ಯಾವಹಾರಿಕಕಲ್ಪನೆಗಳನ್ನು ಅನುಸರಿಸಿದಮಾತ್ರಕ್ಕೆ ಅವನ್ನು ಸಿದ್ಧಾನ್ತಮಾಡಿ ಹೇಳಿರುವುದಿಲ್ಲ. ಜಿಜ್ಞಾಸುವಿಗೆ ಪ್ರತ್ಯಗಾತ್ಮನ ಬೋಧನೆಯಾಗಬೇಕು. ಆಗಲೇ ಶಿಷ್ಯನು ಕೃತಾರ್ಥನಾಗುವನು ಉಪದೇಶಮಾಡಿದ ಪ್ರಯಾಸವೂ ಆಗಲೇ ಸಾರ್ಥಕವಾಗುವುದು. ಇಂತಹ [ಅದ್ವೈತಾತ್ಮನ ಬೋಧನೆಯ] ಮಹತ್ಪ್ರಯೋಜನಕ್ಕಾಗಿ ಹಿಡಿದ ಉಪಾಯಗಳಲ್ಲಿ ಅಧ್ಯಾರೋಪ-ಅಪವಾದ ಎಂಬ ಪ್ರಕ್ರಿಯೆಯೇ ಪ್ರಧಾನವಾದುದು. [ಅದರ ಸಮರ್ಥನೆಗಾಗಿಯೂ] ಮತ್ತದರೊಡನೆ ವಿಷಯಪ್ರತಿಪಾದನೆಗೋಸ್ಕರವಾಗಿಯೂ ವಿಷಯಗ್ರಹಣೆಗೆ ಸುಲಭವಾಗಲೆಂದೂ ಅನೇಕಪ್ರಕ್ರಿಯೆಗಳನ್ನು ತೆಗೆದುಕೊಂಡಿರುತ್ತಾರೆ. ಕಾರ್ಯಕಾರಣಭಾವ. [ತ್ರಿವಿಧಸೃಷ್ಟಿ] ವಿಶೇಷಣವಿಶೇಷ್ಯಭಾವ. ಶರೀರತ್ರಯ. ಅವಸ್ಥಾತ್ರಯ. ಪಂಚಕೋಶಪ್ರಮೇಯ. ಸಾಕ್ಷಿಕೂಟಸ್ಥ. ಸೃಷ್ಟಿಪ್ರಳಯಕಥೆ ಪ್ರಕೃತಿಪುರುಷವಿಭಾಗ. ಜೀವೇಶ್ವರವ್ಯವಸ್ಥೆ. ಬಿಂಬಪ್ರತಿಬಿಂಬಕಲ್ಪನೆ. ಮಾಯೆ ಮಾಯಾವಿ. ಅಂಶಾಂಶಿ. ಅವಿದ್ಯೆ ಅಜ್ಞಾನ ಇದರಲ್ಲಿಯೂ ಸೂಕ್ಷ್ಮವಾಗಿ ಮೂಲಾಜ್ಞಾನ

ಕಲ್ಪನೆ ಮಾಡಿಕೊಂಡರೆ ಎಂದರೂ ತಪ್ಪಲ್ಲ

ಇತ್ಯಾದಿ ಅನೇಕ ಪ್ರಕ್ರಿಯೆಗಳನ್ನು ಉಪಯೋಗಿಸಿಕೊಂಡು ಪ್ರತಿಪಾದನೆ ಮಾಡುತ್ತಾರೆ. ವ್ಯವ
ಜಿಜ್ಞಾಸುವು ವ್ಯವಹಾರಸ್ಥ ಪ್ರರೂಪಿಸುತ್ತಾನೆ. ಅವನಿಗೆ ಬೋಧವಾಗಬೇಕು.
ಹಾರದ ಅನುಪಪತ್ತಿಯನ್ನು ತಪ್ಪಿಸಿಕೊಂಡು ಪರಮಾರ್ಥವನ್ನು ಬೋಧಿಸಬೇಕು ಮುಖ್ಯವಾಗಿ
ಆತ್ಮನಲ್ಲಿ ಬದ್ಧಮುಕ್ತ ವ್ಯವಸ್ಥೆಯನ್ನು ಸಮರ್ಥಿಸಬೇಕು. ಪ್ರತ್ಯಕ್ಸ್ವರೂಪದ ಜೀವನು
ಸಂಸಾರಿಯಾಗಿರುತ್ತಾನೆಂದೂ ಈಶ್ವರನು ನಿತ್ಯಶುದ್ಧಬುದ್ಧಮುಕ್ತ ಸಚ್ಚಿದಾನಂದನೇ ಆಗಿರುತ್ತಾನೆಂ
ದೂ ಸಿದ್ಧಾಂತವಾಗಬೇಕು. ಅಂದರೆ ಇದೇನೂ ಯುಕ್ತಿ ಚಮತ್ಕಾರಮಾತ್ರವಲ್ಲ. ಅನುಭವವು
ಒಂದು ವಸ್ತುವನ್ನು ಇತರ ವಸ್ತುವನ್ನು ಅರಿತದ್ದಾಗೂ ಪ್ರದ
ವಸ್ತುತಂತ್ರ. ಕರ್ಮವು ಕರ್ತ್ರಧೀನ ಎಂಬ ಪ್ರತಿಜ್ಞೆಗೆ ಅನುಗುಣವಾದ ಶ್ರುತಿಯುಕ್ತಿ
ಅನುಭವಗಳನ್ನು ಸಮನ್ವಯಗೊಳಿಸಿಕೊಡಬೇಕು. ಶಿಷ್ಯಮನುಷ್ಯನಲ್ಲಿ ಅನಾದಿಕಾಲದಿಂದ
ಹೆಪ್ಪುಗಟ್ಟಿಕೊಂಡಿರುವ ದ್ವೈತವಾಸನೆ, ಸ್ವತಂತ್ರದಂತಹ ಕಲ್ಪನೆಗಳು, ಮತ್ತು ನಿಶ್ಚಿತವನ್ನು
ತೊಲಗಬೇಕು. ಅಯಮಾತ್ಮಾ ಬ್ರಹ್ಮ ಎಂಬ ಅದ್ವೈತ ಗ್ರಹಣೆಯಲ್ಲಿ ಒದಗಬಹುದಾದ ಅಸಂಭಾವನಾ
ವಿಪರೀತಭಾವನಾ ಮತ್ತು ಸಂಶಯಗಳನ್ನು ದೂರಮಾಡಬೇಕು. ಆಗಲೇ ಅಹಂಬ್ರಹ್ಮಾಸ್ಮಿ
ಎಂದು ಶಿಷ್ಯನು ಎಚ್ಚರಗೊಳ್ಳುವನು. ಆಗಲೇ ಅಭಯಬ್ರಹ್ಮವನ್ನು ಸೇರುವನು, ಕೃತಾರ್ಥ
ನಾಗುವನು. ಮೇಲಿನ ಪ್ರಕ್ರಿಯೆಗಳಲ್ಲಿ ಯಾವುದರಿಂದಲಾದರೂ ಸರಿ ಪ್ರತ್ಯಗಾತ್ಮನ ಯಥಾರ್ಥ
ಜ್ಞಾನವಾದರೆ ಅದೇ ಅವರಿಗೆ ಒಪ್ಪಿತವಾಗಬಹುದು. ಎಲ್ಲವೂ ಎಲ್ಲರಿಗೂ ಅನ್ವಯಿಸಬೇಕೆಂಬ
ನಿರ್ಬಂಧವೇನೂ ಇಲ್ಲ. ಒಟ್ಟಿನಲ್ಲಿ ಶಾಸ್ತ್ರಾಚಾರ್ಯೋಪದೇಶವು ಬುದ್ಧಿಯ ಭ್ರಮೆಯನ್ನು ಕಳೆ
ಯುತ್ತದೆ. ದೇಹಾದಿ ಬುದ್ಧಿಪರ್ಯಂತವಾಗಿ ಈ ಬಾಹ್ಯಜಗತ್ಪದಾರ್ಥಗಳು ಕೂಡ ಕಾರ್ಯವೆಂದು
ತಿಳಿಸಿಕೊಟ್ಟು ಅದರೊಡನೆಯೇ ಆತ್ಮನಲ್ಲಿ ಕೂಡಿಹಾಕಿಕೊಂಡಿರುವ ಅನಾತ್ಮವಸ್ತುಧರ್ಮಗಳನ್ನು
ತೋರಿಸಿಕೊಟ್ಟ ಅಧ್ಯಾರೋಪಪ್ರಕ್ರಿಯೆಯು ಸಾರ್ಥಕವಾಗಿದೆ. ಮತ್ತೆ ಅಪವಾದಪ್ರಕ್ರಿಯೆಯನ್ನ
ನುಸರಿಸಿ ಸಾಧಕಶಿಷ್ಯನು ತನ್ನಲ್ಲಿ ಅನಾತ್ಮವಸ್ತುಧರ್ಮಗಳನ್ನೆಲ್ಲ ಅಲ್ಲಗಳೆದುಕೊಂಡು ಕೇವಲ
ಆತ್ಮಸ್ವರೂಪದಲ್ಲಿ ನೆಲೆಗೊಳ್ಳುತ್ತಾನೆ. ಈ ರೀತಿ ಪ್ರಮಾಣದಂತೆ ಉಪಕರಿಸುತ್ತಿರುವುದರಿಂದ
ಶಾಸ್ತ್ರವನ್ನು ಔಪಚಾರಿಕವಾಗಿ ಪ್ರಮಾಣವೆಂದು ಬಗೆಯುತ್ತಾರೆ. ನಿಜವಾಗಿ ಆತ್ಮನು ಅಪರೋಕ್ಷ
ನಾಗಿರುವುದರಿಂದ ತನಗೆ ತಾನೇ ಸಿದ್ಧನಾಗಿರುತ್ತಾನೆ. ಇಂತಹ ಜ್ಞಾನಸ್ವರೂಪದ ಅದ್ವೈತಬ್ರಹ್ಮವನ್ನು
ಅರಿತುಕೊಂಡರೆ ಮತ್ತೆ ಬೇರೆ ಏನನ್ನು ತಿಳಿಯಬೇಕಾದುದಿಲ್ಲ.

४४ भवतो बुद्धिनिश्चयं कथयेत्यनुपृष्टः श्रीरामेण हनुमानाह -
देहदृष्ट्या तु दासोऽहं जीवदृष्ट्या त्वदंशकः ।
आत्मदृष्ट्या त्वमेवाहमिति मे निश्चया मतिः ॥ इति ।

विश्वं वै ब्रह्मतन्मात्रं संस्थितं विष्णुमायया ।
ईश्वरेण परिच्छिन्नं कालेनाव्यक्तमूर्तिना ॥

सत्त्वाज्जागरणं विद्यात् रजसा स्वप्नमादिशेत् ।
प्रस्वापं तमसा जन्तोस्तुरीयं त्रिषु संततम् ॥
नैवास्तमनमर्कस्य नोदयः सर्वदा स्थिते सतः ।
उदयास्तमनाख्यं हि दर्शनादर्शनं रवेः ॥ देवीभाग. ८.१५.२४.

प्रकृतिविकृतिभिन्नः शुद्धबोधस्वभावः
सदसदिदमशेषं भासयन् निर्विशेषः ।
विलसति परमात्मा जाग्रदादिष्ववस्था-
स्वहमहमिति साक्षात् साक्षिरूपेण बुद्धेः ॥
- वि. चू. -

ಶ್ರೀಮದ್ಭಾಗವತದ ಪುರಂಜನೋಪಾಖ್ಯಾನದ ಸ್ಕಂ ೪. ಅಧ್ಯಾ ೨೮. ಶ್ಲೋಕ ೬೨-೬೩.

ಅವಿಜ್ಞಾತಸಖನಾದ ಈಶ್ವರನು ಜೀವಪುರುಷನಿಗೆ ಉಪದೇಶಿಸುತ್ತಾನೆ :- 89

यथा पुरुष आत्मानमेकमादर्शचक्षुषोः ।
द्विधाभूतमवेक्षेत तथैवान्तरमावयोः ॥
अहं भवान्न चान्यस्त्वं त्वमेवाहं विचक्ष्व भोः ।
न नौ पश्यन्ति कवयश्छिद्रं जातु मनागपि ॥

ಮನುಷ್ಯನು ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡಾಗ ತನ್ನ ರೂಪವೇ ಎರಡು ರೂಪಗ
ತಾನು ಇಲ್ಲಿರುವುದು ಒಂದು ರೂಪ. ಮತ್ತೆ ಆಚೆಯಲ್ಲಿ ಕನ್ನಡಿಯಲ್ಲಿ ಕಾಣುವ ರೂಪವು ಮತ್ತೊಂದು.
ಳೆಂದು ಕಾಣುವುದು. ಕಣ್ಣು ರೂಪಪ್ರತ್ಯಕ್ಷಕ್ಕೆ ಕರಣವಾಗಿರುವುದು. ಕನ್ನಡಿಯು ಉಪಾಧಿಯಾಗಿದ್ದುಕೊಂಡು ಪ್ರತಿಬಿಂಬವನ್ನು ಗ್ರಹಿಸುವುದು. ಆಗ ಕನ್ನಡಿ ಮತ್ತು ಕಣ್ಣುಗಳ ಮಧ್ಯಸ್ಥಿಕೆ ಇರುವುದರಿಂದ ಪ್ರೇಕ್ಷಕನಿಗೆ ತನ್ನ ಏಕರೂಪವೇ ಎರಡಾಗಿ ತೋರುವುದು. ಹೀಗಿರುವಾಗ ಒಂದು ಬಿಂಬ = ಸತ್ಯವಾದುದು. ಇನ್ನೊಂದು ಪ್ರತಿಬಿಂಬ = ವಾಸ್ತವವಾಗಿರುವುದಲ್ಲ. ಎಂದು ತಿಳಿದರೆ ಸರಿ. ಹಾಗಲ್ಲದೆ ಸತ್ಯವಾಗಿ ಎರಡು ರೂಪಗಳು ಎಂದು ತಿಳಿದುಕೊಂಡರೆ ತಪ್ಪು ತಾನೆ. ಹಾಗೆಯೇ ಪ್ರತ್ಯಗ್ಆತ್ಮನು ಬಿಂಬಭೂತನು. ಅವನು ಪ್ರೇಕ್ಷಕನಾಗಿ ನೋಡಿದಾಗ ದೇಹಾದ್ಯಂತಃಕರಣದಲ್ಲಿ ತನ್ನದೇ ಪ್ರತಿಬಿಂಬವನ್ನು ಕಂಡು ಎರಡುರೂಪಗಳು ಎಂದು ಬಗೆದರೆ ತಪ್ಪಲ್ಲವೆ ? ಮಕ್ಕಳಿಗೆ ಬಿಂಬ ಪ್ರತಿಬಿಂಬಗಳ ಯಾಥಾತ್ಮ್ಯವು ಹೇಗೆ ತಿಳಿದಿರುವುದಿಲ್ಲವೋ ಹಾಗೆಯೇ ಸಾಮಾನ್ಯವಾಗಿ ಮನುಷ್ಯನಿಗೆ ಆಧ್ಯಾತ್ಮಿಕತತ್ತ್ವವು ತಿಳಿದಿರುವುದಿಲ್ಲ. ಮಕ್ಕಳು ಮೋಸಹೋಗುವಂತೆ ಮನುಷ್ಯನೂ ಮರುಳಾಗಿರುತ್ತಾನೆ. ಅಂದರೆ ಅವನ ನಿಜಾತ್ಮನು ಅದ್ವೈತನಾಗಿದ್ದರೂ ಆ ಕೂಟಸ್ಥ ಸಾಕ್ಷಿಯು ದೃಶ್ಯತಾದಾತ್ಮ್ಯ ಹೊಂದಿರುತ್ತನಾಗಿ ಅಂತಃಕರಣ ಉಪಾಧಿ ಮತ್ತು ಪ್ರೇಕ್ಷಕತ್ವಧರ್ಮ ಇವೆರಡರ ಮಧ್ಯಸ್ಥಿಕೆಯಿಂದ ಆತ್ಮನೊಬ್ಬನಲ್ಲಿ ಎರಡು ಆತ್ಮರೆಂದೂ ಜೀವಾತ್ಮ ಮತ್ತು ಪರಮಾತ್ಮ ಎಂಬ ಎರಡೂ ವಸ್ತುಗಳು ವಾಸ್ತವವಾಗಿರತಕ್ಕವೆಂದೂ ಬಗೆಯುತ್ತಾನೆ. ಇದು ತಪ್ಪುತಿಳಿವಳಿಕೆ ಎಂದಾಗಲೀ ಮತ್ತು ಈ ಆತ್ಮದ್ವಯದಲ್ಲಿ ಬಿಂಬರೂಪದ ಆತ್ಮಸ್ವರೂಪವಾಗಲಿ ಗುರು-ಶಾಸ್ತ್ರೋಪದೇಶವಿಲ್ಲದೆ ತಿಳಿಯುವುದೇ ಇಲ್ಲ. ಅನಾದಿಕಾಲದಿಂದ ಅದ್ವೈತಾತ್ಮನು ಭ

91) ವವಿಲ್ಲದೇ ಅಜ್ಞಾನಿಯಾಗಿರುವುದೇ ಸಾಮಾನ್ಯ ಮನುಷ್ಯನ ಸ್ವಭಾವವಾಗಿರುತ್ತದೆ. ಬೆಂಕಿಯು ಎಲ್ಲೆಡೆಯೂ ಒಳಗಾಗಿ ಸೇರಿಕೊಂಡಿರುವ ಕಬ್ಬಿಣದ ಗುಂಡಿನಂತೆ ಆತ್ಮಾನಾತ್ಮರನ್ನು ಪರಸ್ಪರಾಧ್ಯಾಸದಿಂದ ಕೂಡಿಕೊಂಡಿರುವ ಚೇತನನು ಸಾಕ್ಷಿ ತಾನೇ ಆಗಿರುವುದರಿಂದ ಈ ಸಂಘಾತಾತ್ಮನನ್ನೇ ನಾನು ನಾನು ಎಂದು ತಿಳಿದುಕೊಂಡು ವ್ಯವಹಾರತತ್ಪರನಾಗಿರುವುದು ಸಹಜವಾಗಿದೆ. ಇದು ಭ್ರಮೆ ಎಂದು ಹೇಳಿ ತೋರಿಸಿಯೂ ಇನ್ನು ಶುದ್ಧ ಪರಮಾತ್ಮನೊಬ್ಬನಿದ್ದಾನೆ ಎಂದು ಶಾಸ್ತ್ರವು ತೋರುತ್ತಿದ್ದರೂ ಕೇವಲ ಅಷ್ಟುಮಾತ್ರವನ್ನೇ ನಂಬಿಕೊಂಡರೆ ಸಾಲದು. ಅದು ತತ್ತ್ವಜ್ಞಾನವಾಗಲಾರದು. ಅದರಿಂದ ಪಾರಮಾರ್ಥಿಕ ಅಪರೋಕ್ಷಾನುಭವವು ಆಗಲಾರದು. ಅಧ್ಯಾತ್ಮವಿಜ್ಞಾನವೆಂದರೆ ಭೇದಬುದ್ಧಿರೂಪದ ಸ್ವಾಭಾವಿಕಾಜ್ಞಾನವನ್ನು ಗುರುತಿಸಿ ಅದನ್ನು ದೂರೀಕರಿಸುವ ಸಾಧನೆ [illegible] ಪರಮಾರ್ಥಸ್ವರೂಪದಲ್ಲೇ ನಿಲುಗಡೆಯಾಗುವಂತೆ ಉಪದೇಶಿಸಬೇಕು. ಇಂತಹ ಜ್ಞಾನವಿಜ್ಞಾನವನ್ನೇ ಪುರಂಜನನಿಗೆ ಅವಿಜ್ಞಾತಸಖನು ಪರಿಚಯಮಾಡಿಕೊಟ್ಟು ಕೊನೆಗೆ ಹೇಳುತ್ತಾನೆ:- ನಾನೇ ನೀನು, ನೀನು ನನಗಿಂತ ಬೇರೆ ಇಲ್ಲ. ಅಲ್ಲ. ನೀನೇ ನಾನು. ನಾನು ನಿನಗಿಂತ ಬೇರೆ ಆಗಿ ಇಲ್ಲ. ಹೀಗೆಂಬ ಪರಮಾರ್ಥವನ್ನು ತಿಳಿ=ಜ್ಞಾನಾನುಭವದಿಂದ ಅರಿತುಕೋ. ಹೀಗಿಯ ಸಮ್ಯಗ್ಜ್ಞಾನವು ಯಾರಿಗೆ ಲಭಿಸಿತೋ ಅವರೇ ಕವಿಗಳು. ಸಮ್ಯಗ್ದರ್ಶನವುಳ್ಳ ಕ್ರಾಂತದರ್ಶಿಗಳು ವೈಶಿಷ್ಟ್ಯರು. ಇಂತಹ ಪೂರ್ಣದೃಷ್ಟಿಯುಳ್ಳ ಜ್ಞಾನಿಗಳು ತಮ್ಮ ನಿಜಸ್ವರೂಪವನ್ನು ಕರಣಾದಿಕಾರ್ಯ ಮತ್ತು ಉಪಾಧಿಯಿಂದ ಪೃಥಕ್ಕರಿಸಿಕೊಂಡು ಆತ್ಮೈಕ್ಯವಸ್ತುವಿನಲ್ಲಿ ನೆಲೆನಿಂತಿರುತ್ತಾರೆ. ಅವರು ಬಿಂಬ ಪ್ರತಿಬಿಂಬ ಎಂದಾಗಲೀ ಜೀವಾತ್ಮ ಪರಮಾತ್ಮ ಎಂದಾಗಲೀ ಕಿಂಚಿತ್ತೂ ಭೇದವನ್ನು ಕಾಣುವುದಿಲ್ಲ, (ಬಿಂಬರೂಪದ ಆತ್ಮನೇ ಪ್ರಕಾಶಸ್ವರೂಪ) ವಿಜ್ಞಾನೈಕರಸಸ್ವಭಾವದಿಂದಿರುತ್ತಾರೆ. ಹೀಗೆಯಾದಾಗಲೂ ಸುಷುಪ್ತಿಸ್ಥಾನದ ಅನುಭವದಂತೆ ಭೇದದರ್ಶನವಿಲ್ಲದೇ ಅದ್ವೈತನಿಷ್ಠೆಯಿಂದಿರುವುದೇ ಅಧ್ಯಾತ್ಮವಿಜ್ಞಾನವು. ಇದೇ ನಿರ್ವಿಕಲ್ಪಕಜ್ಞಾನ ಅಥವಾ ನಿರ್ವಿಶೇಷಜ್ಞಾನವಾಗಿದೆ. ವಿಜ್ಞಾನಾನುಭವವಾಗಿದೆ.

ವ್ಯವಹಾರಸ್ಥ ಪುರುಷನು ಸಂಘಾತಾತ್ಮಕನಾಗಿ ಪ್ರತ್ಯಕ್ಷಕನಾಗಿ ಕರಣಗಳ ಸಹಾಯದಿಂದ ದೃಶ್ಯ ವಿಷಯಗಳನ್ನು ನೋಡಿ ಇದು ಇದು ಎಂದು ವಿಶೇಷಜ್ಞಾನಗಳನ್ನೇ ಮಾಡಿಕೊಳ್ಳುತ್ತಿರುತ್ತಾನೆ.

ಅಹಂ ಪರಮಾರ್ಥ

ಅಹಂ ಅಥವಾ ನಾನು ಎಂಬ ವಸ್ತುವೇ ಮನುಷ್ಯನ ನಿಜಾತ್ಮನಾಗಿರುತ್ತಾನೆ. ಶಾಸ್ತ್ರಬೋಧ್ಯನಾದ ಆತ್ಮನಿಗೆ ನಾಮ ಗುಣಾಕ್ರಿಯಾದಿಗಳಿಲ್ಲದಿದ್ದರೂ ಆ ಅಚ್ಯುತವಸ್ತುವು ಅಹೇಯಾನುಪಾದೇಯವಾಗಿರುವುದರಿಂದಲೂ, ದೋಷಲೇಶವಿಲ್ಲದ್ದರಿಂದಲೂ ಅದಕ್ಕೆ ಅಹಂ ಎಂದೇ ರಹಸ್ಯನಾಮಧೇಯವಿರುವುದು. ಈ ನಿರ್ವಿಶೇಷಜ್ಞಾನಸ್ವರೂಪದ ಕೂಟಸ್ಥಸಾಕ್ಷಿಯನ್ನೇ ಉಪನಿಷತ್ತುಗಳಲ್ಲಿ ಔಪನಿಷದಪುರುಷನೆಂದು ತಿಳಿಸಲಾಗಿದೆ. ಮನುಷ್ಯಾದಿ ಸಕಲ ಪ್ರಾಣಿಗಳೂ ತಮ್ಮ ಸಮಸ್ತ ವ್ಯವಹಾರದ ಮೂಲದಲ್ಲಿ ನಾನು ಎಂಬ ಅನುಭವಸಿದ್ಧಿಯನ್ನಿಟ್ಟುಕೊಂಡೇ ಆ ಬಳಿಕ ಪ್ರವರ್ತಿಸಿಕೊಂಡಿರುತ್ತಾರೆ. ನಾನು-ಅಹಮನುಭವವಿಲ್ಲದೇ ಏನೊಂದು ವ್ಯವಹಾರವೂ ಹುಟ್ಟುವುದೇ ಇಲ್ಲ.

ಆತ್ಮನು ಸ್ವಯಂಜ್ಯೋತಿಸ್ವರೂಪನಿರುವುದರಿಂದ ಪ್ರಕಾಶಿಸುವುದೇ ಅವನ ಸ್ವಭಾವವಾಗಿರುತ್ತದೆ. ಕೇವಲ ಪ್ರತ್ಯಯಸ್ವರೂಪದ ಆ ಸಾಕ್ಷಿಯು ತಾನು ಪ್ರಕಟವಾಗಲು ಅರ್ಹಸ್ಥಳವಾದ ಅಂತಃಕರಣದಲ್ಲಿ ಅಂದರೆ ಪ್ರಾಣಿಗಳ ಮನಸ್ಸಿನಲ್ಲಿ ಅಹಂ ಎಂದೇ ಪ್ರಕಾಶಿಸುವನೆಂದು ಉಪನಿಷತ್ತು ತಿಳಿಸುತ್ತಿದೆ. ಅಂತಃಕರಣವು ಅನ್ನಮಯವಾಗಿದ್ದರೂ ಅದು ಶುದ್ಧವಾದ ಶ್ರೇಷ್ಠಾಂಶದಿಂದಲೇ ಉಂಟಾಗಿರುವುದರಿಂದ ಕನ್ನಡಿಯಂತೆ ಸ್ವಚ್ಛಸತ್ತ್ವಮಯವಾಗಿರುತ್ತದೆ. ಅದರಲ್ಲಿ ಆತ್ಮಗ್ರಹಣಶಕ್ತಿ ಇರುವುದು. ಬೇರೆ ಸ್ಥಳಗಳಲ್ಲಿ ಅಂತಹ ಶಕ್ತಿಯಿರುವುದಿಲ್ಲವಾದ್ದರಿಂದ ಅಲ್ಲೆಲ್ಲ ನಾನು ಎಂಬ ಸ್ಫೂರ್ತಿಯುಂಟಾಗುವುದಿಲ್ಲ. ಸ್ಫೂರ್ತಿ. ಪ್ರಕಾಶ. ಸತ್. ಚಿತ್. ಜ್ಞಪ್ತಿ ಇರುವಿಕೆ ತೋರುವುದು ಜ್ಞಾನ. ಜ್ಯೋತಿ. ಅರಿವು. ಅನುಭವ ಈ ಮುಂತಾದವುಗಳಲ್ಲಿ ಒಂದೇ ಅರ್ಥವು. ಕೇವಲಪ್ರತ್ಯಯಸ್ವರೂಪದ ಸಾಕ್ಷಿಯು ಶುದ್ಧಸತ್ತ್ವರೂಪದ ಮನಸ್ಸಿನಲ್ಲಿ ಪ್ರಕಾಶಿಸುತ್ತಾನೆ. ಅಹಂ ಎಂದೇ ಸ್ಫುರಿಸುತ್ತಾನೆ. ಈ ಬಾಹ್ಯದ ಘಟಾದಿ ವಿಷಯಗಳು ಪ್ರಕಟವಾಗಬೇಕಾದರೆ ಬೇರೆ ಬೆಳಕು ಅಥವಾ ಪ್ರಮಾಣಾನುಗ್ರಹ ಸಾಪೇಕ್ಷೆಯಿರುತ್ತದೆ. ಆತ್ಮಪ್ರಕಾಶಕ್ಕೆ ಯಾವ ಸಾಪೇಕ್ಷೆಯೂ ಇಲ್ಲ. ಅವನನ್ನು ಪ್ರಕಾಶಪಡಿಸುವಂತಹ ಬೇರೆ ವಸ್ತುವೇ ಇರುವುದಿಲ್ಲ. ಅವನು ತನಗೆ ತಾನೇ ಬೆಳಗುವವನು. ಅವನ ಬೆಳಕಿನಿಂದಲೇ ದೃಶ್ಯಗಳು ತೋರುತ್ತವೆ. ಸರ್ವದಾ ಪ್ರಕಾಶಿಸುವ ಆತ್ಮನ ಪ್ರಕಾಶವನ್ನೇ ಅನುಸರಿಸಿ ಇತರ ವಸ್ತುಗಳು ಅಂದರೆ ಅಂತರ ಬುದ್ಧಿ ಅಹಂಕಾರಾದಿಗಳೂ ಬಾಹ್ಯಜಗತ್ತೂ ಪ್ರಕಾಶಿಸುತ್ತವೆ. ಆದ್ದರಿಂದಲೇ ಈ ಸಕಲವೂ ಪರತಂತ್ರ. ಆತ್ಮನೊಂದೇ ಸ್ವತಂತ್ರವಸ್ತುವು. ಹೀಗೆ ತಾನೇ ಪ್ರಕಟಗೊಳ್ಳುವ ಅಹಂಸ್ಫೂರ್ತಿ (ಪ್ರತ್ಯಯಮಾತ್ರ) ಯನ್ನೇ

ಕರ್ತೃಕರ್ಮ ಭೇದನಿಯಮದಿಂದಲೂ ಜ್ಞಾನವಿಷಯನಾಗುವನಲ್ಲ.

ಅಪರೋಕ್ಷಾನುಭವ ವಸ್ತುತ್ವಾನೆ. ಆತ್ಮನಿಗೆ ಆತ್ಮನು ದೂರವಾಗಿಲ್ಲ. ಪರೋಕ್ಷನಾಗುವದಿಲ್ಲ. ಪ್ರತ್ಯಕ್ಷ ಆಗುವದಿಲ್ಲ. ಏಕೆಂದರೆ ಅವನು ಅಮೂರ್ತವಸ್ತುವಾಗಿದ್ದಾನೆ. ಇಂದ್ರಿಯಗಳಿಗೆ - ಮಾನಸಿಗೆ ವಿಷಯನಲ್ಲ. ಆದರೆ ಅನುಭವಸ್ವರೂಪನಾಗಿರುತ್ತಾನೆ. ಪ್ರತ್ಯಕ್ಷವಲ್ಲ. ಪರೋಕ್ಷವೂ ಆಗಲ್ಲ. ಎಂದಬಳಿಕ ಈ ಅನುಭವವು ಸಾಕ್ಷಾತ್ - ಅಪರೋಕ್ಷವೇ ಆಗಿರಬೇಕಷ್ಟೆ. ಆದ್ದರಿಂದ ಮನುಷ್ಯನಿಗೆ ತನ್ನ ಆತ್ಮನು ಸಾಕ್ಷಾತ್ ಅಪರೋಕ್ಷಾನುಭವಸ್ವರೂಪನಿದ್ದಾನೆಂದು ತಿಳಿಯಬೇಕು. ಈ ಅಹಂಪ್ರತ್ಯಯಕ್ಕೆ ದೇಶ ಕಾಲ ಕ್ರಿಯೆ ಕಾರಕ ಕರಣ ಪ್ರಮಾಣ ಅದೃಷ್ಟ ಮುಂತಾದ ಸಾಮಗ್ರಿಯಿಂದರ ಆವಶ್ಯಕತೆಯು ಇಲ್ಲ. ಅಹಂಪ್ರತ್ಯಯವೇ ಬೇರೆ. ಪ್ರಕೃತಪರಿಣಾಮರೂಪದ ಅಹಂ. ನಾನು ಎಂಬ (ಅಹಂಭಾವ = ಅಹಂಕಾರ) ಜ್ಞಾನವೇ ಬೇರೆ. (ಒಂದು ಸಮನಸ್ಕೋತ್ಪನ್ನ. ಇನ್ನೊಂದು ಸವಿಕಲ್ಪ) ಈ ಸೂಕ್ಷ್ಮವು ಎಲ್ಲರಿಗೂ ತಿಳಿಯುವದಿಲ್ಲ. ಆದ್ದರಿಂದಲೇ ಆತ್ಮವಿಷಯದಲ್ಲಿ ಭ್ರಮೆಯುಂಟಾಗುತ್ತಿರುವದು.

ಶಾಸ್ತ್ರದಲ್ಲಿ ಅಹಂಪ್ರತ್ಯಯಗಮ್ಯ ಎಂದು ಹೇಳಿದ್ದಾರಲ್ಲ. ಅದರ ಅಭಿಪ್ರಾಯವೇನೆಂದರೆ - ಕೇವಲಾತ್ಮಯವ ವ್ಯವಹಾರಕ್ಕೆ ವಿಷಯನಾಗಿರುವದಿಲ್ಲವಾದ್ದರಿಂದ ಆ ಸಾಕ್ಷಿಯನ್ನು ವಿಶಿಷ್ಟಸಾಕ್ಷಿಯಾಗಿ ಹೇಳಿದರೂ ಶಬಲಸ್ವರೂಪವನ್ನೇ ಹೇಳಿದಂತಾಗುವದು. ಸ್ವಾನುಭವಸ್ವರೂಪನೇ ಆತ್ಮನು ಎಂದು ತಿಳಿಸುವದಕ್ಕಾಗಿ ಹಾಗೆ ಹೇಳಿದ್ದಾರೆ. ಅಹಂಪ್ರತ್ಯಯಸ್ವರೂಪನೆಂದರೂ ಅದೇ ತಾತ್ಪರ್ಯವೆಂದು ಬಗೆಯಬೇಕು.

ಅಹಂ - ಅಥವಾ ನಾನು ಎಂಬ ಸ್ವಾಭಾವಿಕ - ನಿರಪೇಕ್ಷ ಸ್ಫೂರ್ತಿಯು ಎಲ್ಲರಿಗೂ ಇದ್ದೇ ಇರುತ್ತದೆ. ಆದರೆ ಈ ಲೋಕಜನರ ಅಹಮನುಭವದಲ್ಲಿ ಗ್ರಹಣೆಯು ವ್ಯತ್ಯಾಸವಾಗುತ್ತಿದೆ. ಅದಕ್ಕೆ ಅಧಿಕಾರ - ಅಭ್ಯಾಸ ಭೇದವಿರುವದೇ ಮುಖ್ಯಕಾರಣ. ಪ್ರಾಕೃತಪುರುಷರಿಗೆ ಸಂಘಾತರೂಪ ದೇಹವೇ ನಾನು ಎಂಬ ಗ್ರಹಣೆಯಿರುತ್ತದೆ. ವಿದ್ಯಾಬುದ್ಧಿಕುಶಲರಾದ ಕೆಲವರಿಗೆ ದೇಹದಲ್ಲಿಯೂ ಜೀವದಲ್ಲಿಯೂ ಅವ್ಯವಸ್ಥಿತವಾಗಿ ಆತ್ಮಬುದ್ಧಿಯಿರುವದು. ವಿಚಾರಪಾರಂಗತರಾದ ಮಹಾತ್ಮರಿಗೆ ನಾನು ಬ್ರಹ್ಮ ಎಂದೇ ನಿರ್ಣಯವಿರುತ್ತದೆ.

ವಸ್ತುವು ತೋರುವಾಗ ನಾನಾಪ್ರಕಾರವಾಗಿ ಕಾಣಬರುವದಾಗಿದೆ.* ನಿಶ್ಚಿತಯಥಾರ್ಥರೂಪದಲ್ಲಿ ತೋರುವದೆಂಬ ನಿಯಮವಿಲ್ಲ. ಕಾಲ ದೇಶ ಸನ್ನಿವೇಶ ಅಧಿಕಾರ ಕಾರಣಸಾಮಗ್ರಿ ಕಾರಕಪ್ರಮಾಣಗಳ ಮೂಲಕವೇ ಮನುಷ್ಯನಿಗೆ ತಿಳಿಯಬೇಕಾಗಿದೆ. ಅದೇ ಅಭ್ಯಾಸ.

* ಈ ಗ್ರಹಣೆಗಳಿಗೆ ತಕ್ಕ ಪ್ರಯತ್ನ ಮಾಡುವಿರುವಾಗ [illegible]

ಪರೋಕ್ಷವಾಗಿ ಜ್ಞಾನವುಂಟಾಗುವುದು ಅಭ್ಯಾಸದಲ್ಲಿ, ತೋರುವ ವಸ್ತುವು ಮುಖ್ಯವಾಗಿ ದೂರ ಬಗೆಯಿಂದ ತೋರಬಹುದು. ಹಾಗೆ ಆಲೋಕದಲ್ಲಿ ಕಂಡುಬರುತ್ತದೆ. ಏನೋ ಒಂದು ವಸ್ತು ಎಂದು ಸಾಮಾನ್ಯವಾಗಿ ಕಾಣಬಹುದು. ಅಥವಾ ಚಿಪ್ಪಿನಲ್ಲಿ ಇದು ಬೆಳ್ಳಿ ಎಂದು ಅನ್ಯಥಾ ಪ್ರಕಾರವಾಗಿ ತೋರಬಹುದು. ಅಥವಾ ಚಿಪ್ಪಿನಲ್ಲಿ ಇದು ಚಿಪ್ಪು ಎಂದೇ ಯಥಾರ್ಥಜ್ಞಾನ ಉಂಟಾಗಬಹುದು. ಅಂತು ಪ್ರಮಾಣಸಾಮಗ್ರೀ ಸಾಕಲ್ಯ ವೈಕಲ್ಯ ಮೂಲಕ ಸಾಪೇಕ್ಷವಾಗಿಯೇ ಮನುಷ್ಯನಿಗೆ ತಿಳಿವು ಹುಟ್ಟಬೇಕು. ಮತ್ತು ಹುಟ್ಟಿದ ಜ್ಞಾನವು ಪ್ರಮೆಯೋ ಭ್ರಮೆಯೋ ಎಂಬುದನ್ನು ಮತ್ತೆ ಪರೀಕ್ಷಿಸಿ ನಿಶ್ಚಯಿಸಬೇಕಾಗುತ್ತದೆ. ವಿಶೇಷಜ್ಞಾನ ಅಥವಾ ಸಾಪೇಕ್ಷಜ್ಞಾನದ ಸ್ಥಿತಿಯೇ ಹೀಗೆ.

ನಾನು ಆತ್ಮ ಎಂದು ಪೂರ್ಣರೂಪದಿಂದ ಕಂಡುಕೊಳ್ಳುವುದು ಉತ್ತಮವಾದ ಜ್ಞಾನ. ಈ ಮುಖ್ಯ ಯಥಾರ್ಥರೂಪದ ಅನುಭವವು ಸ್ಥಿತಪ್ರಜ್ಞನಿಗೆ ಉಂಟಾಗುತ್ತದೆ. ಇರುತ್ತದೆ. ಚಿಪ್ಪು ಇದು ಎಂದು ವಿಶೇಷರೀತಿಯಿಂದ ಕಂಡದ್ದು ಯಥಾರ್ಥಜ್ಞಾನವಷ್ಟೆ. ಪ್ರಮಾಣಸಾಮಗ್ರಿಗಳು ಸರಿಯಾಗಿರುವಾಗ ಸರಿಯಾದ ಜ್ಞಾನವೇ ಉಂಟಾಗುವುದು. ಅದೇ ಪ್ರಮಾಣದ ಕಥೆ. ಆ ಜ್ಞಾನವು ಕಲ್ಪನೆಯಲ್ಲ. ಗೌಣವಲ್ಲ. ಮೂಢನಂಬಿಕೆಯೂ ಅಲ್ಲ. ಅದೇ ವಿಜ್ಞಾನವು. ಜ್ಞಾನಿಯುಗೆ ವೇದಪ್ರಮಾಣ ಶ್ರವಣಮನನಕ್ರಮದಿಂದ ಅಧ್ಯಾರೋಪವನ್ನು ನಿವರ್ತನಗೊಳಿಸಿಕೊಂಡು ಅಹಮಾತ್ಮಾ ಎಂಬ ವಿಶೇಷಜ್ಞಾನವು ಹುಟ್ಟಿದರೂ ಅಚಲ ನಿದಿಧ್ಯಾಸನದಿಂದ ತನಗೆ ತಾನು ಅಪರೋಕ್ಷನಾಗಿದ್ದ ತನ್ನ ಸ್ವರೂಪವೇ ಜ್ಞಾನವಾಗಿರುವುದನ್ನು ಕಂಡುಕೊಳ್ಳುತ್ತಾನಾಗಿ ಅಹಂಬ್ರಹ್ಮಾಸ್ಮಿ ಎಂದು ಅಪರೋಕ್ಷಾನುಭವದಲ್ಲಿ ನೆಲೆಗೊಳ್ಳುವನು. ಇದೇ ಮುಖ್ಯವಾದ ಯಥಾರ್ಥಜ್ಞಾನವು. ಅಧ್ಯಾತ್ಮ ಚಿಂತನೆಗೆ ಇದೇ ಮುಖ್ಯವಾದ ಫಲವು. ಇದೇ ಮುಕ್ತಿಯು.

ಆತ್ಮಾನಾತ್ಮವಿಚಾರಮಾಡಿಕೊಳ್ಳದ ಅವಿವೇಕಿಗೆ ನಾನು ಎಂದು ಸ್ಫುರಿಸುವ ಆತ್ಮನು ದೇಹಾದಿ ಸಂಘಾತರೂಪದಿಂದಲೋ - ಮಿಥ್ಯಾತ್ಮರೂಪದಿಂದಲೋ ತೋರಿಕೊಳ್ಳುವನು. ತನಗೆ ತಾನು ಅಪರೋಕ್ಷನಾಗಿರುವುದರಿಂದ ಮತ್ತು ಆತ್ಮನು ಸ್ವಯಂಪ್ರಕಾಶನಾಗಿರುವುದರಿಂದ ಅವನ ಅನುಭವಕ್ಕೆ ಪ್ರಮಾಣವೇನೂ ಬೇಕಾಗಿರುವುದಿಲ್ಲ. ಮೊಟ್ಟಮೊದಲಿನ ಸ್ಫುರಣೆಗೆ ಪ್ರಮಾಣವೇ ಇಲ್ಲ. ಸ್ಫುರಿಸಿಕೊಂಡಿರುವುದೇ ಆತ್ಮನ ಸ್ವಭಾವವಾಗಿದೆ. ಮತ್ತು ಆತ್ಮನು ಸರ್ವತ್ರ ಪರಿಪೂರ್ಣನಾಗಿರುವುದರಿಂದಲೂ ದೃಶ್ಯಗಳೆಲ್ಲ ತತ್ತ್ವತಃ ಸ್ವಯಮೇ ಆಗಿರುತ್ತಾನಾದ್ದರಿಂದಲೂ ಸ್ವಾಭಾವಿಕವಾಗಿ

ಅಧ್ಯಾಸಾನುಭವವು ಸಾಮಾನ್ಯವಾಗಿ ಉಂಟಾಗುವುದು. ಇದು ಸಾಮಾನ್ಯಜ್ಞಾನವಾಗಿರುವುದರಿಂದಲೇ ವಿಶೇಷಜ್ಞಾನವಲ್ಲ, ಮಿಥ್ಯಾಜ್ಞಾನವಾಗಿದೆ ವಿಜ್ಞಾನವಲ್ಲ. ಇದರಲ್ಲಿ ದೇಹ ಇಂದ್ರಿಯ ಪ್ರಾಣ. ಅಂತಃಕರಣ ವಿಶಿಷ್ಟವಾದ ಜೀವಚೈತನ್ಯವು, ಇದೇ ಅಹಂಕಾರವು. ಅಂದರೆ ಸಂಘಾತವನ್ನೇ ನಾನು ಎಂದು ಗ್ರಹಿಸುವುದಾಗಿದೆ. ಆದ್ದರಿಂದಲೇ ಮನುಷ್ಯನು ನಾನು ದೇಹ ನನ್ನ ದೇಹ ಎಂದು ಸಾಮಾನ್ಯವಾಗಿ ತಿಳಿಯುತ್ತಿದಾನೆ. ಇದು ಮಿಥ್ಯಾಜ್ಞಾನ. ತಪ್ಪು ತಿಳುವಳಿಕೆಯೇ. ದಿಗ್ಭ್ರಮೆಯಂತೆ ಭ್ರಮರೂಪವಾಗಿದೆ. ಬೆಳಕು ಇಲ್ಲದ ಅವಕಾಶದಲ್ಲಿ ಇದೇ ಪೂರ್ವ ಎಂದು ತಿಳಿಯುವುದಿಲ್ಲವಷ್ಟೆ. ಆಗ ಪ್ರಮಾಣ - ಸೂರ್ಯ ಬೆಳಕು - ಸಾಧನ ಇದ್ದರೆ ದಿಕ್ಕು ತಿಳಿಯುವುದು. ಹಾಗೆಯೇ ಆತ್ಮಸ್ವರೂಪನಿರ್ಣಯಕ್ಕೆ ಪ್ರಮಾಣದ ಆವಶ್ಯಕತೆಯಿರುತ್ತದೆ. ಅದಿಲ್ಲದೇ ಉಂಟಾಗುವ ಜ್ಞಾನವು ಭ್ರಮೆಯೇ, ಇದು ಸ್ವಾಭಾವಿಕವಾದ ಅವಿದ್ಯೆಯು

ಆತ್ಮನೇ ಆಗಿರುವ ಮನುಷ್ಯನಿಗೆ ದೇಹಾದಿಗಳಲ್ಲಿ ನಾನು ಎಂಬ ಭ್ರಮಾತ್ಮಕ ಜ್ಞಾನವು ಸ್ಫುರಿಸುವುದು. ದೇಹಾದಿಗಳಿಗೆ ಜ್ಞಾನವುಂಟಾಗುವುದಿಲ್ಲ. ಅವೆಲ್ಲ ಜಡವಸ್ತುಗಳು. ಆತ್ಮನು ಚೇತನನಾಗಿದ್ದರೂ ಆ ಮೂಲಸ್ವರೂಪದಲ್ಲಿ ದೇಹಾದಿಗಳಿಲ್ಲದ್ದರಿಂದ ಅವನು ಪ್ರಮಾತೃವಾಗಿರುವುದಿಲ್ಲ. ಪ್ರಮಾಣದ ಸ್ಥಿತಿಯೂ ಇರುವುದಿಲ್ಲ. ಆದ್ದರಿಂದ ವಿಶೇಷಜ್ಞಾನವು ಆದಿಯಲ್ಲೇ ಉಂಟಾಗಲಾರದು. ಅಲ್ಲದೇ ದೇಹಾದಿಗಳೂ ಆತ್ಮನೂ ತಾದಾತ್ಮ್ಯವು ಅಸಂಭಾವ್ಯವಾಗಿರುತ್ತದೆ. ಜಡಚೇತನಗಳು ಭಿನ್ನವೇ ಆಗಿರುತ್ತವಷ್ಟೆ. ಮತ್ತು ಆತ್ಮನೂ ಜಡದೇಹಕ್ಕೂ ವಾಸ್ತವವಾಗಿ ಯಾವ ತರಹ ಸಂಬಂಧವೂ, ಸಂಭವಿಸುವುದೇ ಇಲ್ಲ. ಅಮೂರ್ತವಾದ ಆಕಾಶಕ್ಕೂ ಘಟಪಟಾದಿ ಪದಾರ್ಥಗಳೂ ಸಂಬಂಧವುಂಟಾಗಲಾರದಷ್ಟೆ. ದೃಶ್ಯಪದಾರ್ಥಗಳೊಡನೆ ಸ್ವಪ್ನದ್ರಷ್ಟಾವಿಗೆ ಸಂಬಂಧವಿಲ್ಲದಿರುವುದು ಅನುಭವಸಿದ್ಧವಾಗಿದೆ. ಆದ್ದರಿಂದ ಸಂಬಂಧವಿರುವುದಿಲ್ಲ. ಆದಾಗ್ಯೂ ಪ್ರಕಾಶರೂಪ ಸ್ವಭಾವದ ಸಮರ್ಥನಾದ ಆತ್ಮನಿಗೆ ವಿಶಿಷ್ಟದೇಹದಲ್ಲಿ ನಾನು ಎಂಬ ಜ್ಞಾನವುಂಟಾದರೆ ಇದರಲ್ಲಿ ಸಾಮಾನ್ಯಜ್ಞಾನವು ಅಂತರ್ಗತವಾಗಿದರೂ ಸಹಜಜ್ಞಾನವಾಗಿರುವುದಿಲ್ಲ. ಸ್ವರೂಪಜ್ಞಾನವಲ್ಲ ಅನಾದಿಕಾಲದಿಂದ ಸಹಜವಾಗಿರುತ್ತ ಆದ್ದರಿಂದಲೇ ಇದನ್ನು ಸ್ವಾಭಾವಿಕಜ್ಞಾನ, ಅಹಂಕಾರ ಅಥವಾ ತಪ್ಪು ತಿಳುವಳಿಕೆ ಎಂದೇ ಹೇಳಬೇಕು. ಅಹಂಕಾರಮೂಲಕವಾದ ಭ್ರಮೆಯೆಂದೇ ತಿಳಿದಿನ. ಇದೇ ಅವಿದ್ಯೆಯು

ಪ್ರತೀಯ ಪ್ರಕೃತಿ ಪರಿಣಾಮರೂಪದ ಅಹಂಕಾರವಾಗಿರುತ್ತೆ. ಶುದ್ಧವಾದ ಜ್ಞಾನವಲ್ಲ. ಶುಕ್ತಿರಜತ, ಜಲದುಷ್ಣ, ರಕ್ತಸ್ಫಟಿಕ, ಮರುಜಲ ಎಂಬ ಭ್ರಾಂತಿಯ ವ್ಯವಹಾರದಂತೆ ಈ (ಪ್ರಕೃತಿ ಸಂಬಂಧದ) ದೇಹಾತ್ಮ ಜ್ಞಾನವು ಮಿಥ್ಯೆಯಾಗಿರುತ್ತದೆ. ಇದು ಆತ್ಮಸ್ಫೂರ್ತಿಯ ಎರಡನೆಯ ಬಗೆ. ಜ್ಞಾನಿಗಳಾದ ಸಮಸ್ತ ಜನರಿಗೂ ಇಂತಹ ಜ್ಞಾನವಿರುವುದು (ಅಹಂಕಾರವು) ಸ್ವಾಭಾವಿಕವಾಗಿದೆ. ಈ ಜ್ಞಾನಕ್ಕೆ ವಿಷಯನಾದ (ಆಶ್ರಯನೂ ಆಗಿರುವ) ಜೀವಚೇತನನು ಮುಖ್ಯಾತ್ಮನಾಗಿರುವುದಿಲ್ಲ. ಮಿಥ್ಯಾತ್ಮನಾಗಿರುತ್ತಾನೆ.

ಇನ್ನು ಆತ್ಮಸ್ಫೂರ್ತಿಯಾಗುವ ಮೂರನೇ ಬಗೆಯೆಂದರೆ:- ಗೌಣಾತ್ಮಕನಾಗಿ ತೋರುವುದು. ಪುತ್ರವಿತ್ತಾದಿಗಳ ಮೇಲೆ ಅತಿಶಯ ಮೋಹವುಳ್ಳ ಮನುಷ್ಯನು ಅವುಗಳ ಹಾನಿವೃದ್ಧಿಗಳಿಂದ ತಾನೇ ಹಾಳಾದೆ. ವೃದ್ಧಿಹೊಂದಿದೆ ಎಂದು ಭಾವಿಸುವುದು ಕಾಣುತ್ತದಷ್ಟೆ. ಈ ನಾನು ಎಂಬ ಅನುಭವದಲ್ಲಿ ಪುತ್ರ ವಿತ್ತಾದಿಗಳನ್ನು ಅವನು ತನ್ನ ಆತ್ಮಸ್ವರೂಪದಲ್ಲಿ ಸೇರಿಸಿಕೊಂಡಿರುತ್ತಾನೆ. ಅವರೇ ಬೇರೆ ತಾನೇ ಬೇರೆ. ಹಾಗಿದ್ದರೂ ಅಭೇದವನ್ನು ಭಾವಿಸಿಕೊಂಡಿರುತ್ತಾನೆ. ಇಂತಹ ಆತ್ಮಗ್ರಹಣೆಗೆ ವಿಷಯನಾದವನು ಮುಖ್ಯಾತ್ಮನಲ್ಲ. ಗೌಣಾತ್ಮನಾಗಿರುತ್ತಾನೆ. ಹೀಗೆ ಗ್ರಹಿಸಿಕೊಂಡುದೂ ತಪ್ಪುತಿಳುವಳಿಕೆಯೇ, ಭ್ರಾಂತಿಯೇ.

ಈ ವಿವೇಚನೆಯಲ್ಲಿ ಉತ್ತಮವಾದ ಜ್ಞಾನ ಎಂಬ ಮೊದಲನೆಯ ನಾನು ಎಂಬ ಆತ್ಮಸ್ಫೂರ್ತಿಯು ಅಹಂಕಾರರೂಪವಾದದ್ದಲ್ಲ (ಪ್ರಕೃತಿಯ ಪರಿಣಾಮರೂಪವಲ್ಲ.) ಕೇವಲ ಪ್ರತ್ಯಯರೂಪದ ನಾನು ಎಂಬ ಅರಿವು ವಿವೇಕಿಗಳಿಗೆ ವೇದಪ್ರಮಾಣದಿಂದ ಪ್ರಯತ್ನಪೂರ್ವಕವಾಗಿ ನಿಶ್ಚಯಮಾಡಿಕೊಂಡುದಾಗಿರುತ್ತದೆ. ಆದ್ದರಿಂದ ಆ ಮಹಾತ್ಮರಿಗಾಗುವ ನಾನು ಆತ್ಮಾ ಎಂಬ ಅನುಭವವು ಶುದ್ಧಬುದ್ಧಮುಕ್ತ ಸಚ್ಚಿದಾನಂದ ಪರಮವಸ್ತುವೇ ಆಗಿರುವುದು. ದೇಹೇಂದ್ರಿಯಾದಿಗಳನ್ನು ತಮ್ಮ ಸ್ವರೂಪದಿಂದ ದೂರಕ್ಕೆ ತಳ್ಳಿ ತಾನು ಮಾತ್ರ ಉಳಿದುಕೊಂಡಿರುವ ವಿಭಕ್ತಸ್ವರೂಪದ ಆತ್ಮನು ಪ್ರಮಾತೃವಾಗಿರುವುದಿಲ್ಲ. ಪ್ರಮಾಣಗಳು (ಪ್ರಮಾತೃವಿನ ಸ್ವರೂಪದಲ್ಲಿ) ತತ್ಪೂರ್ವ ಆರೋಪಿಸಿಕೊಂಡ ಅಂಶಗಳನ್ನು ಅಪವಾದಮಾಡಿಕೊಳ್ಳಲು ಉಪಯೋಗವಾಗಿಬಿಟ್ಟವು. ಆ ಬಳಿಕ ತನಗೆ ತಾನೇ ಅಪರೋಕ್ಷವಾಗಿ ಸಾಕ್ಷಾತ್ ಸ್ಫುರಿಸುವ ವಸ್ತುವೇ ಆತ್ಮನು=ಬ್ರಹ್ಮವೇ,

ಮನಸ್ಸಿನಲ್ಲಿ ಆತ್ಮಸ್ಫೂರ್ತಿಯಾಗುವುದೆಂದು ಹೇಳಿದ್ದರಿಂದ ಆತ್ಮಪ್ರಕಾಶಕ್ಕೆ ಮನಸ್ಸಿನ ಅವಶ್ಯಕತೆ ಇರುತ್ತೆಂದು ತಿಳಿಯಬಾರದು. ಆತ್ಮನೇ ಸ್ವತಂತ್ರವಸ್ತುವು. ಸರ್ವದಾ ಪ್ರಕಾಶಿಸಿ

ಕೊಂಡಿರುವ ಆತ್ಮನನ್ನೇ ಆಶ್ರಯಿಸಿ ಅನುಸರಿಸಿಕೊಂಡು ಅನ್ತಃಕರಣಾದಿ ಸರ್ವ ವಸ್ತುಗಳು ಪ್ರಕಾಶಿಸುತ್ತಿರುತ್ತವೆ. ಅಂದರೆ ತ್ರಿಕಾಲಗಳಲ್ಲೂ ಅವಸ್ಥಾತ್ರಯದಲ್ಲೂ ಅವುಗಳ ಸಾಕ್ಷಿಯಾಗಿ ಏಕರೀತಿಯಿಂದ ನಿರ್ವಿಶೇಷಜ್ಞಾನಸ್ವರೂಪದಿಂದ ಬೆಳಗುವುದೇ ಆತ್ಮನ ಸ್ವಭಾವವು. ಅದೇ ಚಿರಸ್ಥಾಯಿ. ಮನಸ್ಸು ಹಾಗಲ್ಲ. ಎಚ್ಚರದಲ್ಲಿರುವ ಮನಸ್ಸು ಸ್ವಪ್ನದಲ್ಲಿರುವುದಿಲ್ಲ. ಸ್ವಪ್ನದ ಮನಸ್ಸು ಎಚ್ಚರದಲ್ಲಿರುವುದಿಲ್ಲ. ಈ ಎರಡು ತರದ ಮನಸ್ಸು ಸುಷುಪ್ತಿಯಲ್ಲಿರುವುದಿಲ್ಲ. ಅದು ಚಿರಸ್ಥಾಯಿಯಾಗಿದ್ದರೆ ಬೇರೆ ಬೇರೆ ಅವಸ್ಥೆಗಳೇ ಉಂಟಾಗುವ ಸಂಭವವಿಲ್ಲ. ನಿರ್ವಿಶೇಷಜ್ಞಾನಸ್ಥಿತಿ ಎಂಬ ನಿದ್ರೆಯೇ ಉಂಟಾಗದುಹೋದೀತು. ನಿದ್ರೆಯಲ್ಲಿ ವಿಶೇಷಜ್ಞಾನವಿಲ್ಲದ ಆತ್ಮನ ಚೈತನ್ಯಮಾತ್ರ ನಿರ್ವಿಶೇಷ ಜ್ಞಾನ ಸ್ಥಿತಿಯು ಅನುಭವಸಿದ್ಧವಾಗಿದೆ. ಮನುಷ್ಯನು ಮಲಗಿದ್ದಾಗಲೂ ಇದ್ದೇ ಇರುತ್ತಾನಷ್ಟೆ. ಆಗ ಅವನೇ ಇಲ್ಲದಿದ್ದರೆ ಮತ್ತೆ ಎದ್ದೇಳುವವನಾವನು? ಮತ್ತು ಮೂರು ಅವಸ್ಥೆಗಳು ಒಂದಾದ ಮೇಲೊಂದರಂತೆ ಬಂದು ಹೋಗುವುದನ್ನು ಕಾಣುವವನು ಸ್ಮರಿಸುವವನು ಯಾರು? ಎಚ್ಚರದಲ್ಲಿ ವ್ಯವಹಾರ ಮಾಡಿದ ಮನುಷ್ಯನು ಬಳಿಕ ಮಲಗಿ ಸ್ವಪ್ನದರ್ಶನಮಾಡಿಯೂ ಮತ್ತೆ ಅವನೇ ನಿದ್ರಾಸುಖವನ್ನನುಭವಿಸಿಯೂ ಪುನಃ ಅವನೇ ಎಚ್ಚರಗೊಂಡು ತನ್ನ ಎಲ್ಲ ಅವಸ್ಥೆಗಳ ಅನುಭವಗಳನ್ನು ಸ್ಮರಿಸಿಕೊಳ್ಳುವ ಆತ್ಮನು ಸಾಕ್ಷಿ ಒಬ್ಬನೇ ಆಗಿರಬೇಕಷ್ಟೆ. ಹೀಗೆಯೇ ಬಾಲ್ಯ ಯೌವನ ವಾರ್ಧಕ್ಯ ಎಂಬ ವಯೋವಸ್ಥೆಗಳ ಸಾಕ್ಷಿಯೂ ತಾನೇ ಒಬ್ಬ ಆತ್ಮನಷ್ಟೆ. ಈ ಎಲ್ಲ ಅನುಭವಗಳ ಪ್ರಮಾಣದಿಂದ ಆತ್ಮನೇ ಸ್ವತಂತ್ರ. ಅವನು ದೇಶ ಕಾಲ ವಸ್ತುಗಳಿಗೆ ಅಧೀನನಾಗಿರುವುದಿಲ್ಲ ಎಂದು ನಿರ್ಣಯವಾಗುತ್ತದೆ.

ಈ ಅನುಸಂಧಾನವಿಚಾರಗಳಿಂದ ತಿಳಿಯುವುದೇನೆಂದರೆ:- ಅಶೇಷಮನಃಪ್ರಚಾರಗಳಿಗೂ ಆತ್ಮನೇ ಸಾಕ್ಷಿಯು. ಅವನೇ ಆಧಾರ. ಸ್ವತಂತ್ರ ಸಚ್ಚಿದಾನಂದವಸ್ತು ಬ್ರಹ್ಮವೇ.

अहेयमनुपादेयं मनोवाचामगोचरम् ।
अप्रमेयमनाद्यन्तं ब्रह्म पूर्णं महन्महः ॥

ವಿಚಾರ ಸಂಗ್ರಹ.

ಸರ್ವರ ನಿಜಾತ್ಮನು ಯದ್ಯಪಿ ಶುದ್ಧಪರಮಾನಂದನಿರುತ್ತಾನೆ. ಆದರೂ ಅವಿದ್ಯಾ ಮಾಯಾಮೋಹಿತರಾದವರಿಗೆ ಸ್ವಸ್ವರೂಪಗ್ರಹಣೆಯಾಗುವುದು ಬಹು ಕಠಿಣವಾಗಿರುತ್ತದೆ. ಸ್ವಾಭಾವಿಕಾಜ್ಞಾನದಲ್ಲಿ ಭ್ರಮಿಸಿಕೊಂಡಿರುವ ಶಿಷ್ಯಶ್ರೋತೃವಿಗೆ ಪ್ರಬೋಧವನ್ನುಂಟುಮಾಡುವುದಕ್ಕಾಗಿಯೇ ಕಾರ್ಯಕಾರಣಭಾವವನ್ನನುಸರಿಸಿ ಅಭ್ಯಾಸದಲ್ಲಿರುವ ಪ್ರಮಾಣಗಳನ್ನು ಒಪ್ಪಿ ಪ್ರಮೇಯಗಳನ್ನು ಶಾಸ್ತ್ರೀಯವಾಗಿ ಕಲ್ಪಿಸಿ ಉಪದೇಶಿಸಲಾಗುತ್ತದೆ. ಇದೇ ಸಂಪ್ರದಾಯ.

ಜೀವನು ಅಜ್ಞಾನಾವೃತನಿರುತ್ತಾನೆ. ಪರತಂತ್ರನಾಗಿರುತ್ತಾನೆ. ಕರ್ತೃ ಭೋಕ್ತೃ ಸಂಸಾರಿಯಾಗಿದ್ದಾನೆ.

ಈಶ್ವರನು ಮಾಯೆಯನ್ನು ಸ್ವಾಧೀನಪಡಿಸಿಕೊಂಡು ಸ್ವತಂತ್ರ ಸರ್ವಜ್ಞ ಸರ್ವಶಕ್ತ ಅಸಂಸಾರಿಯಾಗಿರುತ್ತಾನೆ. ಈ ಪ್ರಕ್ರಿಯೆಯು ವೇದಪ್ರಮಾಣವನ್ನನುಸರಿಸಿ ಒಪ್ಪಿಕೊಂಡಿರುವ ಪ್ರಮೇಯವಾಗಿದೆ. ಇದರಿಂದ ಏಕಾತ್ಮನಲ್ಲಿಯೇ ಬದ್ಧ ಮತ್ತು ಮುಕ್ತ ಎಂಬ ವ್ಯವಸ್ಥೆಯನ್ನು ಗ್ರಹಿಸಲು ಸೌಕರ್ಯವಾಗಿದೆ. ಈ ಉಪದೇಶದಿಂದ ಆತ್ಮನಲ್ಲಿ ಉಪಾಧಿಸಂಸರ್ಗವಿದ್ದರೆ, ಮತ್ತು ಆ ಉಪಾಧಿಗಳ ತಾರತಮ್ಯ ಮೂಲಕವಾಗಿಯೇ ಭೇದತಾರತಮ್ಯಗ್ರಹಣೆಗೆ ಅವಕಾಶವಾಗುವುದೆಂದು. ವಾಸ್ತವದಲ್ಲಿ ಈ ಪ್ರಮೇಯ ಪ್ರಪಾದಿಸಲ್ಪಟ್ಟಿರುವ ಉಪಾಧಿಗಳನ್ನು ವಿಚಾರದಿಂದ ಅಪವಾದ ಮಾಡಿಕೊಳ್ಳಲಿಕ್ಕಾಗಿ ಕೊನೆಯಲ್ಲಿ ತಾನು ಮಾತ್ರವೇ ಕಲ್ಪಿತವೆಂದು ತಿಳಿಯುವುದು ಪರಮಾರ್ಥತತ್ತ್ವವು ನಿರುಪಾಧಿಕ ನಿರ್ವಿಶೇಷ ಚೇತನವೆಂದು ಗ್ರಹಿಸಬೇಕು.

ಶಂಕಾ:- ಪಾರಮಾರ್ಥಿಕವಾಗಿ ಅದ್ವೈತಾತ್ಮನೇ ಸತ್ಯನೆಂದಾಗಲಿ. ವ್ಯವಹಾರಸ್ಥಿತಿಯಲ್ಲಿ ಜೀವೇಶಾದಿ ವ್ಯವಸ್ಥೆಯು ಏರ್ಪಡಲಿ. ಆದರೆ ಈಗ ಪ್ರಮಾತೃ, ಪ್ರಮಾಣ, ಪ್ರಮೇಯ ಮತ್ತು ಪ್ರಮೆ ಇವುಗಳು ಗೊತ್ತಾಗುವವನು? ಇವುಗಳ ವ್ಯವಸ್ಥೆ ಹೇಗೆ?

ಉತ್ತರ - ಈಗ ಇಲ್ಲಿ ಅಂದರೆ ವ್ಯವಹಾರಸ್ಥಿತಿಯೇ ತಾನೆ! ಇಲ್ಲಿ ವ್ಯವಹಾರಸ್ಥಪುರುಷನು ವಿಶೇಷಜ್ಞಾನಗಳಿಂದ ಕೂಡಿದ್ದರೂ ಪರಮಾರ್ಥಜ್ಞಾನವಿಲ್ಲದವನೇ ಆಗಿರುತ್ತಾನೆ. ಅವನು ಸ್ವರೂಪಾಜ್ಞಾನದಿಂದ ಆವೃತನೇ ಆಗಿರುತ್ತಾನೆ. ಅಂದರೆ ಅವನಲ್ಲಿ ಅವಿದ್ಯೆಯು ಹುಟ್ಟುಗೊಂಡಿರುತ್ತದೆ. ಅವಿದ್ಯೆಯು ಯಾವಾಗ ಇರುವುದೋ ಆಗಲವನು ಮಾಯಾಮೋಹಿತನೇ ಪ್ರಮಾತೃ-ವ್ಯವಹಾರಸ್ಥನೂ ಆಗಿರುತ್ತಾನೆ ಆತ್ಮಪ್ರಕೃತಿಯೇ ಆದ ಮಾಯೆಯಿಂದ ~~ಯಲ್ಲಿ~~ ಎರಡು ಬಗೆಯ ಆತ್ಮಶಕ್ತಿಗಳು ಪ್ರಕಟಗೊಳ್ಳುವುವು. ಒಂದು ಸೃಜನಶಕ್ತಿಯು ಮತ್ತೊಂದು ಮೋಹಕಶಕ್ತಿಯು. ಇವುಗಳ ಕಾರ್ಯವು ಅಜ್ಞಾನಿಯಲ್ಲಿ ನಡೆಯುತ್ತದೆ.

ಅಂದರೆ ಆತ್ಮನಿಗೂ ಪಂಚಕೋಶಗಳಿಗೂ ಇರುವ ಭೇದವನ್ನು ಮುಚ್ಚುವುದು. ಇದರಿಂದ ಅನ್ಯೋನ್ಯಾಧ್ಯಾಸವು ಕಾಣಿಸಿಕೊಳ್ಳಲು ಕಾರಣವಾಗುವುದು. ಆತನ ವಿವಿಕ್ತತೆ ತಿಳಿಯುವುದಿಲ್ಲ. ಆತನು ಬುದ್ಧಿಗುಣಗಳ ಪರಿಣಾಮಗಳಿಂದಿರುವಂತಾಗುತ್ತಾನೆ. ಅವನ ಬುದ್ಧಿಗೆ ಅಜ್ಞಾನ ಮತ್ತು ಅಧ್ಯಾಸವುಂಟಾಗುತ್ತದೆ,

98 ಬುದ್ಧಿಸಾಮ್ಯದಿಂದ ಭೇದ ತಿಳಿಯದೆ ಜೀವನು ತಾನು ಅಜ್ಞಾನಿ ಎಂದು ಸಂಸಾರಾತ್ಮನೆಂದು ಬಗೆಯುತ್ತಾನೆ,

ಸ್ವರೂಪಾಜ್ಞಾನಿಯಾದ ಪುರುಷನಲ್ಲಿ ಅವಿದ್ಯೆಯಿರುವುದರಿಂದ. ಆ ಆತ್ಮಪ್ರಕೃತಿಯಾದ ಅಜ್ಞಾನದಲ್ಲಿಯೂ ಆ ಆತ್ಮಶಕ್ತಿದ್ವಯವೇ ಎದ್ದುಕೊಳ್ಳುತ್ತವೆ. ಒಂದು ಆವರಣಶಕ್ತಿ. ಮತ್ತೊಂದು ವಿಕ್ಷೇಪಶಕ್ತಿ. ಸ್ವರೂಪಜ್ಞಾನವಿಲ್ಲದಂಬ ಅಜ್ಞಾನವು ಪುರುಷನಲ್ಲೂ (ಆತ್ಮಚೇತನ)ನಲ್ಲಿ ಮೊದಲು ಆವರಣವನ್ನುಂಟುಮಾಡುವುದು. ಇದು ಇದೇ ಅಭಾನಾವರಣವು, ಇದರಿಂದ (ಆತ್ಮಚೇತನ ವಸ್ತುವು) ಕಾಣುವುದಿಲ್ಲ ಎಂಬ ಅನುಭವವಾಗುವುದು. ಇದರಿಂದಲೇ ಅಸತ್ತ್ವಾವರಣವೆಂಬ ಕಾರ್ಯವು ಉಂಟಾಗುವುದು. ಅದರಿಂದ (ಆತ್ಮಚೇತನ ವಸ್ತುವೇ) ಇಲ್ಲ ಎಂಬ ಅನುಭವ ತಲೆದೋರಿಕೊಳ್ಳುವುದು. ಹೀಗೆ ಆವರಣಶಕ್ತಿಯಿಂದ ಎರಡು ಬಗೆಯ ವ್ಯವಹಾರಗಳಿಗೆ ಅವಕಾಶವುಂಟಾಗಿದೆ. ಮತ್ತೆ ವಿಕ್ಷೇಪಶಕ್ತಿಯಿಂದ ಚಿತ್ತವು ಕ್ಷೋಭೆಗೊಂಡು ದೇಹಾತ್ಮರುಗಳಿಗೆ ಅನ್ಯೋನ್ಯಾಧ್ಯಾಸವುಂಟಾಗಿ ಬಹಿರ್ಮುಖವಾಗಿ ವಿಷಯಗಳಲ್ಲಿ ತತ್ಪರತೆಯನ್ನು ಪಡೆಯುತ್ತಿರುವುದು.

ಹೀಗೆ ಮೂಲಸ್ಥಿತಿಯಲ್ಲಿ ಆವರಣಾವರ್ತಕ್ಕಾಗ ಜೀವ ಚೇತನವಸ್ತುವಿನಲ್ಲಿ ಅದಕ್ಕೆ ಪೂರ್ವದಲ್ಲಿ ಸಂಸ್ಕಾರಬೀಜಮೂಲಕ ಜೀವೇಶವಿಭಾಗವಿರುವುದರಿಂದ ಆವರಣ ಅಂಶಗಳನ್ನು ಮೊದಲು ಮುಚ್ಚುವುದು. ನೇತ್ರದ ಮುಂದೆ ಹಸ್ತವಿದ್ದರೆ ಅದು ಸೂರ್ಯನಿಗೂ ಆವರಣವುಂಟುಮಾಡುವುದಿಲ್ಲ. ಇಲ್ಲಿ ನೇತ್ರಕ್ಕೆ ಮಾತ್ರವೇ ಮರೆ ಎನ್ನುವಂತಿಲ್ಲ. ಹಸ್ತದಿಂದ ನೇತ್ರಕ್ಕೆ ಪೂರ್ಣವಾಗಿ ಆವರಣವುಂಟಾಗಿದ್ದರೆ ಆಗ ಹಸ್ತವು ಪ್ರತ್ಯಕ್ಷವಾಗದೇ ಇರಬೇಕಾಗುವುದು. ಆದರೆ ಹಸ್ತವು ತೋರುತ್ತಿರುವುದು. ಆದ್ದರಿಂದ ಸೂರ್ಯನಿಗೆ ಆವರಣವುಂಟಾಗುವುದನ್ನು ಒಪ್ಪಬೇಕು. ಹಾಗೆ ಬ್ರಹ್ಮವು ಆವೃತವಾಗಿದೆ. ಹೀಗೆ ಅಜ್ಞಾನಿ ಪುರುಷನಲ್ಲಿ ಚೇತನಾತ್ಮನಿಗೆ ಆವರಣವುಂಟಾಗಲು ಆಗ ವಿಕ್ಷೇಪಶಕ್ತಿಯ ಕಾರ್ಯವುಂಟಾಗತೊಡಗುವುದು. ಆಗಲೇ ಅವಿಜ್ಞಾತಾತ್ಮಪ್ರಕೃತಿಯಾದ ಅವಿದ್ಯೆಯು ಪೂರ್ವಕರ್ಮಸಂಸ್ಕಾರಪ್ರಭಾವದಿಂದ ವೃತ್ತಿರೂಪ ಕಾಲತ್ರಯಾರೂಢದಿಂದ ಕೂಡಿಕೊಂಡು ಸಮಸ್ತ ವಿಕಾರಗಳನ್ನು ಅಂದರೆ ಬುದ್ಧಿ ಅಹಂಕಾರ ಪ್ರಾಣಾದಿ ಪರಿಣಾಮಗಳನ್ನು ಪಡೆಯುವುದು. ಆ ಪರಿಣಾಮಗಳೊಡನೆ ಕೂಡಿಕೊಂಡಿರುವ ಚೇತನಾಂಶ ಅಂದರೆ ಜೀವಪ್ರಕೃತಿಯು ವಿಕಾರವಡೆಯುತ್ತಿರುವಂತೆ ಕಾಣುವುದು. ಮತ್ತು ಆಗಲೇ ಈ ಉಪಾಧಿಗಳಿಗೂ ಉಪಹಿತ ಚೇತನಾಂಶಕ್ಕೂ ಸಮಸ್ತಕ್ಕೂ ಅಧಿಷ್ಠಾನವಾದ ಯಾವ ಶುದ್ಧಚೇತನನಿರುವನೋ ಅವನು ನಿಯಾಮಕನಾಗಿ

ಕರ್ಮಫಲದಾತೃವಾಗಿದ್ದು ಈಶ್ವರನಾಗಿರುವ ಬ್ರಹ್ಮವು. ಈ ಸಮಸ್ತ ಜಗದ್ರೂಪವಾಗಿ ವಿವರ್ತನವನ್ನು ಹೊಂದುತ್ತಿರುತ್ತದೆ. ಆ ಸರ್ವಾಧಿಷ್ಠಾನ ಚೇತನವು ಸ್ವರೂಪದಿಂದ ಅಸಂಗನೂ ಸ್ವತಂತ್ರವಾಗಿರುವುದರಿಂದಲೂ ಸ್ವಯಂಪ್ರಕಾಶವಾಗಿರುವುದರಿಂದಲೂ, ಅದಕ್ಕೆ ಈ ಅವಿದ್ಯಾದಿ ಕಾರಣಗಳಿಗೂ ಕಾರ್ಯಗಳಿಗೂ ವಿರೋಧವಾಗಿರುವುದಿಲ್ಲ. ಬೆಳಕು ಕಪ್ಪು ಬಣ್ಣಕ್ಕೆ ವಿರೋಧಿಯಲ್ಲವಷ್ಟೆ. ಸ್ವಯಂಜ್ಯೋತಿಯಾದ ಆ ಪೂರ್ಣಚೇತನನು ಆ ಅವಿದ್ಯೆ ಮತ್ತು ಅದರ ಕಾರ್ಯಗಳನ್ನು ಸುಖದುಃಖಸಂಸಾರವನ್ನು ಪ್ರಕಾಶಪಡಿಸುತ್ತಿರುತ್ತಾನೆ. ಅವನ್ನು ಬೆಳಗಲು ಆ ಸಾಕ್ಷಿಗೆ ಯಾವ ಸಾಧನದ ಅಪೇಕ್ಷೆಯೂ ಇಲ್ಲ. ಆ ಪರಮಾರ್ಥದೃಷ್ಟಿಯಿಂದ ಈ ಪ್ರಮಾಣಾದಿಗಳಿಗೆ ಸ್ಥಿತಿಯೇ ಇಲ್ಲ. ಶಂಕಿಸಿದುದಕ್ಕೆ ಇದು ಒಂದು ಉತ್ತರ.

ಮತ್ತೊಂದು ದೃಷ್ಟಿಯಿಂದ ಸಮಾಧಾನದ ಉತ್ತರ :- ಅವಸ್ಥಾತ್ರಯವುಳ್ಳವನೆಂದು ಭಾವಿಸಿಕೊಂಡಿರುವ ಜೀವನಿಗೆ, ಪ್ರಮಾತೃವಿಗೆ ಜ್ಞಾನವುಂಟಾಗಲು ಪ್ರಮಾಣಗಳ ಆವಶ್ಯಕತೆಯುಂಟು. ಯದ್ಯಪಿ ಜೀವನೂ ಸ್ವರೂಪತಃ ಸ್ವಯಂಪ್ರಕಾಶನೂ ವ್ಯಾಪಕನೂ ಆಗಿದ್ದಾನೆ. ಆದರೂ ಪರಿಚ್ಛಿನ್ನವಾದ ಮತ್ತು ನಾನಾವಿಶೇಷತೆಗಳುಳ್ಳ ಯಾವ ಬುದ್ಧಿ ಎಂಬ ಉಪಾಧಿಯುಂಟೋ ಅದರೊಡನೆ ಬೆರೆತುಕೊಂಡು ತನ್ಮಯತೆಯನ್ನು ಪಡೆದಿರುವಾಗ ಅಲ್ಪಜ್ಞ ಅಲ್ಪವೀರ್ಯ ಪರಿಚ್ಛಿನ್ನ ಅನೇಕ ಎಂಬಂತೆ ರೂಪಾಂತರಗೊಂಡು (ಸ್ವರೂಪಾಜ್ಞಾನಾವೃತನಾಗಿ) ಇರತಕ್ಕವನಾದ್ದರಿಂದ ಜೀವನು ಸ್ವತಂತ್ರವಾಗಿ ಸಕಲ ಪದಾರ್ಥಗಳನ್ನು ಪ್ರಕಾಶಪಡಿಸಲು ಶಕ್ತನಾಗಿಲ್ಲ. ಆದ್ದರಿಂದಲೇ ಇವನು ಚಿದಾಭಾಸಸ್ಥಿತಿಯಲ್ಲಿರುವನು. ಇವನಿಗೆ ಬುದ್ಧಿದ್ವಾರಾ ಜ್ಞಾನವುಂಟಾಗಲು ಪ್ರಮಾಣಪ್ರಮೇಯಾದಿಗಳ ಅಪೇಕ್ಷೆ ಇರುತ್ತದೆ. ಅವನ ಬುದ್ಧಿಗೆ ಯಾವ ಯಾವುದರ ಸನ್ನಿಕರ್ಷವುಂಟಾಗುವುದೋ ಅವುಗಳನ್ನು ಮಾತ್ರ ಬುದ್ಧಿಯ ಮಾರ್ಗದಿಂದಲೇ ಜೀವನು ತಿಳಿಯಬಲ್ಲ. ದೀಪದ ಪ್ರತಿಬಿಂಬವು ಪರಿಚ್ಛಿನ್ನ ಪ್ರತಿಯೋಗಿಮಾತ್ರವನ್ನೇ ಪ್ರಕಾಶಪಡಿಸುವುದಷ್ಟೆ.

ಆತ್ಮಪ್ರಕೃತಿಯಾದ ತ್ರಿಗುಣಾತ್ಮಕ ಅವಿದ್ಯೆಯು ಕರ್ಮವೇಗದಿಂದ ವೃತ್ತಿಪರಿಣಾಮ ಹೊಂದುವುದೆಂದು ಹಿಂದೆ ಹೇಳಿದೆಯಷ್ಟೆ. ಆ ಪರಿಣಾಮಗಳೇ ಪಂಚಭೂತಗಳು. ಅವುಗಳ ಸತ್ತ್ವಪರಿಣಾಮವೇ ಅಂತಃಕರಣ ಅಥವಾ ಬುದ್ಧಿಯಾಗಿರುತ್ತದೆ. ಅದು ಸ್ವಚ್ಛವಾಗಿರುತ್ತದೆ.

ಹಾಗೆ, ಮನಸ್ಸು ಪರಿಮಾಣವುಳ್ಳದಾಗಿರುತ್ತದೆ. ಅದು ಜ್ಞಾನವುಂಟಾಗುವಾಗ ಮನಸ್ಸೆಂಬ ವೃತ್ತಿರೂಪ ತೈಜಸ ನೇತ್ರದ್ವಾರದಿಂದ (ಚಾಕ್ಷುಷಸ್ಥಳದಲ್ಲಿ) ವಿಷಯದೇಶವನ್ನು ಸೇರಿ ಬೆಳಕು ದೀಪದ ಹಾಗೆಯೇ ಆಯಾಯ ವಿಷಯಾಕಾರವನ್ನೇ ತಾಳುವುದು. ಅದು ಸಾವಯವವಾಗಿದ್ದು ಸಂಕೋಚವಿಕಾಸಭಾವದಿಂದಾಗಿ ಈ ಶರೀರಮಧ್ಯದಲ್ಲಿಯೂ ಮತ್ತು ವಿಷಯದೇಶದಲ್ಲಿಯೂ ಏಕಕಾಲದಲ್ಲಿಯೇ ಪ್ರಕಾಶಿಸುವುದು. ಹೇಗೆಂದರೆ — ದೃಷ್ಟಿಯು ನೇತ್ರಗೋಲಕದಲ್ಲಿ ಇದ್ದುಕೊಂಡು ದೂರದ ವಿಷಯದಲ್ಲಿ ಅದೇ ಸಮಯದಲ್ಲಿ ಸಂಪರ್ಕಿಸಿಕೊಂಡಿರುವುದಷ್ಟೆ. ಹಾಗೆಯೇ.

(೧) ಈಗ ದೇಹದಲ್ಲಿ ಬುದ್ಧಿಯ ಯಾವ ಭಾಗವಿರುವುದೋ ಅದರೊಡನೆ ಅಭೇದವಡೆದಿರುವ ಚೇತನ (ಅಂಶ ಎನ್ನಬಹುದು) ವನ್ನು ಅಹಂಕಾರ=ಅಹಂಕರ್ತಾ ಎನ್ನುತ್ತಾರೆ.

(೨) ಅನ್ತಃಕರಣಕ್ಕೂ ಮತ್ತು ವಿಷಯಕ್ಕೂ ಮಧ್ಯಸ್ಥಾನದಲ್ಲಿ ದಂಡಾಯಮಾನವಾದ ಚೇತನವಿಶಿಷ್ಟ ಭಾಗವನ್ನು ಕ್ರಿಯೆ ಅಥವಾ ವೃತ್ತಿ ಎನ್ನುತ್ತಾರೆ.

(೩) ವಿಷಯದಲ್ಲಿ ಸಂಬಂಧವುಳ್ಳ ಅಂದರೆ ತಾದಾತ್ಮ್ಯಪಡೆದ ಚೈತನ್ಯವಿಶಿಷ್ಟಭಾಗವು ಜ್ಞಾನವಿಷಯತೆಯನ್ನು ಸಂಪಾದಿಸುವುದರಿಂದ ಆ ಭಾಗವನ್ನು ಅಭಿವ್ಯಕ್ತಿಯೋಗ್ಯತ್ವವೆನ್ನುತ್ತಾರೆ.

ಅನ್ತಃಕರಣವೇ ಹೀಗೆ ಮೂರು ವಿಧವಾಗಿ ಪರಿಣಾಮಗೊಳ್ಳುತ್ತಿರುತ್ತದೆ. ಬುದ್ಧಿಯ ಈ ಮೂರು ಭಾಗಗಳಲ್ಲಿಯೂ ಚೇತನನ ಪ್ರತಿಬಿಂಬವುಂಟಾಗಿರುತ್ತದೆ. (೧) ಅಹಂಕಾರವಿಶಿಷ್ಟ ಚೇತನನು ಪ್ರಮಾತೃವಾಗಿರುತ್ತಾನೆ. (೨) ವೃತ್ತಿವಿಶಿಷ್ಟ ಚೇತನವು ಪ್ರಮಾಣವೆನಿಸುತ್ತದೆ (೩) ವಿಷಯಗತವಾದ ಬುದ್ಧಿಯ ಅಭಿವ್ಯಕ್ತಿಯೋಗ್ಯವಾದ ಚೈತನ್ಯಾಂಶವು ಪ್ರಮೆ ಎನಿಸುತ್ತದೆ (೪) ಮೊದಲು ಅಜ್ಞಾತವಾಗಿದ್ದು ವೃತ್ತಿಯುಂಟಾದಾಗ ಪ್ರಕಟಗೊಂಡ ವಿಷಯಾವಚ್ಛಿನ್ನವಾದ ಮತ್ತು ಅಭಿವ್ಯಕ್ತಿಯೋಗ್ಯವಾದ ಚೇತನವ ಪ್ರಮೇಯವು. (೫) ವಿಜ್ಞಾತವಿಷಯಾವಚ್ಛಿನ್ನ ಚೇತನವನ್ನು ಫಲ ಎನ್ನುತ್ತಾರೆ.

ಈಗ ಹಿಂದೆ ಕೇಳಿದ ಶಂಕೆಗೆ ಈ ರೀತಿ ಸಾರಾಂಶದ ಉತ್ತರವನ್ನು ಗ್ರಹಿಸಬೇಕು. —

ಪರಮಾರ್ಥದೃಷ್ಟಿಯಿಂದ ಈ ಪ್ರಮಾಣಪ್ರಮೇಯಗಳಿಗೆ ಬೆಲೆಯಿಲ್ಲ, ಸ್ಥಾನವೇ ಇಲ್ಲ, ಬೇಕಾಗಿಲ್ಲ ಎಂದು ಹಿಂದೆಯೇ ಉತ್ತರವನ್ನು ಕೊಟ್ಟಿದೆ. ಈಗ ಶ್ರೋತೃಪುರುಷನ ವ್ಯವಹಾರದೃಷ್ಟಿಯಿಂದ, ಅಂದರೆ ಅವನಿಗೆ ಪ್ರಮಾಣದ ಮೂಲಕವಾಗಿಯೇ ಪರಮಾರ್ಥಬೋಧವಾಗಬೇಕಾಗಿರುವುದರಿಂದ ವ್ಯವಸ್ಥೆಯು ಅವಶ್ಯಕವಾಗಿದೆ. ಪ್ರಮಾಣಗಳಲ್ಲಿ ಅವನಿಗೆ ವಿಶ್ವಾಸವಿರಲೇ ಬೇಕು, ಆ ಬಗ್ಗೆ ಉಪಪತ್ತಿಯನ್ನೇ ಈ ಮೇಲೆ ವಿವರಿಸಿದೆ. ಅಂದರೆ ಪ್ರತಿಯೊಂದು ವ್ಯವಹಾರವನ್ನು ಅಧ್ಯಾಸಮಾಡಿಕೊಂಡೇ ನಡೆಸಲಾಗುತ್ತಿದೆ. ಚೇತನಗ್ರಹಣೆಯಿಲ್ಲದೇ ವ್ಯವಹಾರವು ನಡೆಯಲು ಶಕ್ಯವಿಲ್ಲ. ಆದ್ದರಿಂದ ಮರ್ಮವನ್ನು ಗೊತ್ತುಮಾಡಿಕೊಳ್ಳುವ ಬುದ್ಧಿಶಾಲಿಯು ಸರ್ವತ್ರ ಅನುಸ್ಯೂತವಾಗಿರುವ ಚೈತನ್ಯಾಂಶವನ್ನೇ ಗ್ರಹಿಸಿ ಆ ಪಾರಮಾರ್ಥ್ಯವಾದ ಪರಮಾರ್ಥವನ್ನೇ ಕಂಡುಕೊಳ್ಳಬೇಕು. ಹೀಗೆ ಪ್ರಮಾಣಪ್ರಮೇಯಗಳ ಉಪಯೋಗವು ಸಾರ್ಥಕವಾಗುವುದು. ಮತ್ತು ಶ್ರುತಿಯುಕ್ತಿ ಅನುಭವಗಳ ಪರೀಕ್ಷೆ, ಹಾಗೂ ಅಧ್ಯಾರೋಪ-ಅಪವಾದಪ್ರಕ್ರಿಯೆಗಳ ಮೂಲಕ ಕೊನೆಯಲ್ಲಿ ಪ್ರಮಾಣಗಳ ಹಂಗೇ ಇಲ್ಲದ ಸಾಕ್ಷಾದಪರೋಕ್ಷಾನುಭವವನ್ನೇ ಸಿದ್ಧಿಮಾಡಿಕೊಳ್ಳಬೇಕು. ಇದೇ ಉತ್ತರ.

ಅಜ್ಞಾತಬ್ರಹ್ಮನೇ ಜೀವಪುರುಷನು. ಸ್ವರೂಪಾಜ್ಞಾನವುಳ್ಳ ಅವನ ದೃಷ್ಟಿಯಿಂದ ಅವನೇ ಕಲ್ಪಿಸಿಕೊಂಡ ಅಜ್ಞಾನವು ಬ್ರಹ್ಮವಿಷಯಕವೂ ಬ್ರಹ್ಮಾಶ್ರಯವೂ ಆಗಿರುತ್ತದೆ. ಆ ಬ್ರಹ್ಮವೇ ತನ್ನ ಆತ್ಮನೇ ಆಗಿರುತ್ತಾನೆ. ಬ್ರಹ್ಮವು ವಾಸ್ತವದಲ್ಲಿ ಸ್ವಯಂಪ್ರಕಾಶವೂ ನಿರುಪಾಧಿಕವೂ ಅನವಚ್ಛಿನ್ನವೂ ಆಗಿರತಕ್ಕದ್ದು. ಅಂತಹ ಅನವಚ್ಛಿನ್ನಚೇತನನಲ್ಲಿ ಅವಿದ್ಯಾವಂತನು ಯಾವ ಅಜ್ಞಾನವನ್ನು ವಿಷಯತ್ವಸಂಬಂಧರೂಪವಾಗಿ ಆರೋಪಿಸಿಕೊಂಡಿರುವನೋ ಆ ಅಜ್ಞಾನವನ್ನೇ ಮೂಲಾಜ್ಞಾನ ಎಂದು ಕರೆಯುತ್ತಾರೆ. ಕಿಂಚಿದ್ವಸ್ತುವಿಶಿಷ್ಟ ಅಂದರೆ ಪೂರ್ವಸಂಸ್ಕಾರೋಪಹಿತ ಚೇತನ (ಪ್ರತ್ಯಗಾತ್ಮನಲ್ಲಿ)ನಲ್ಲಿ ಆಧೇಯತಾಸಂಬಂಧರೂಪವಾಗಿ ಯಾವ ಅಜ್ಞಾನವನ್ನು ಕಲ್ಪಿಸಿಕೊಂಡಿರುವನೋ ಅದನ್ನು ಅವಸ್ಥಾಜ್ಞಾನ ಅಥವಾ ತೂಲಾಜ್ಞಾನ ಎಂದು ಕರೆಯುತ್ತಾರೆ.

ನಾನು-ನನ್ನದು ಎಂದು ಸ್ವಾಭಾವಿಕವಾಗಿ ಅಂದರೆ ಪ್ರಮಾಣವೇ ಇಲ್ಲದೇ ಅಯತ್ನಸಿದ್ಧವಾಗಿ ಉಂಟಾಗುತ್ತಿರುವ ಬುದ್ಧ್ಯಾದಿಗಳೊಂದಿಗೆ-ಆತ್ಮನ ಅಭೇದಾಧ್ಯಾಸವೇ-ಅಹಂಬುದ್ಧಿಯೇ ತೂಲಾಜ್ಞಾನವೆಂಬ ಅವಸ್ಥಾಜ್ಞಾನವಾಗಿರುತ್ತದೆ. ಈ ಅಧ್ಯಾಸವು ಏತಕ್ಕೆ ಉಂಟಾಗಿದೆ

ಎಂದು [illegible]ಕೊಂಡು ಆತ್ಮವಿಸ್ಮೃತಿ ಮೂಲಕವಾದ ಸ್ವರೂಪಾಜ್ಞಾನವೇ ಕಾರಣವೆಂದು ಉಪೋದ್ಘಾತೀಯ ಪ್ರಕರಣದಲ್ಲಿ ವಿವರಿಸಿದೆಯಷ್ಟೆ. ಆ ಅಜ್ಞಾನವನ್ನೇ ಈಗ ಇಲ್ಲಿ ಮೂಲಾಜ್ಞಾನ ಎಂದಾ ಇದು ಅನವಚ್ಛಿನ್ನಚೇತನದಲ್ಲಿ ವಿಷಯತ್ವಸಂಬಂಧರೂಪವಾಗಿ ಆರೋಪಿತವಾಗುತ್ತದೆಂದು ಮೇಲೆ ನಿರೂಪಿಸಿದೆಂದು ಗ್ರಹಿಸಬೇಕು. ಮನುಷ್ಯನು ತಾನು ವಿಚಾರಮಾಡಿಕೊಳ್ಳದೇ ಅಜ್ಞಾನಿಯೇ ಆಗಿದ್ದು ಆ ಅಜ್ಞಾನದಿಂದಲೇ ಆತ್ಮನಲ್ಲಿ ಅಜ್ಞಾನವನ್ನು ಆರೋಪಿಸಿಕೊಂಡಿರುತ್ತಾನೆ. ಆರೋಪಿತವಾದುದು ವಸ್ತುಧರ್ಮವಾಗಿರುವುದಿಲ್ಲವಷ್ಟೆ. ಆದ್ದರಿಂದ ಆತ್ಮನಲ್ಲಿ ನಿಜವಾಗಿ ಅಜ್ಞಾನವು ಇರುವುದೇ ಇಲ್ಲ. ಆತ್ಮನು ಸದಾ ಶುದ್ಧ ಬುದ್ಧ ಮುಕ್ತ ಬ್ರಹ್ಮವೇ ಆಗಿರುತ್ತಾನೆ,

ವಿಚಾರಪೂರ್ವಕವಾಗಿ ಆತ್ಮಸ್ವರೂಪಜ್ಞಾನಮಾಡಿಕೊಂಡಾಗ ಅಜ್ಞಾನವು ತೊಲಗುವುದು. ದೇಹಾತ್ಮಾಧ್ಯಾಸವೂ ಹೋಗುವುದು. ಆತ್ಮನಲ್ಲಿ ಅಜ್ಞಾನವೇ ಅಸಂಭವ ಎಂದು ಗೊತ್ತಾಗುವುದರಿಂದ ಮೂಲಾಜ್ಞಾನವೂ ಹೋಗುವುದು.

ಬುದ್ಧಿಯು ಆತ್ಮಪ್ರಕೃತಿಪರಿಣಾಮರೂಪವಾಗಿರುತ್ತೆ. ಇಂತಿರುವ ಬುದ್ಧಿಗೆ ಆತ್ಮನೊಡನೆ ಉಂಟಾಗಿರುವ ಸಂಬಂಧವು ಸ್ವಾಭಾವಿಕವಾಗಿರುತ್ತದೆ. ಅಂದರೆ ಈ ಸಂಬಂಧವು ಕರ್ಮಜನ್ಯವಾದುದಲ್ಲ. ಆದರೆ ಬುದ್ಧಿಗೆ ವಿಷಯಗಳೊಡನೆ ಉಂಟಾಗುವ ಸಂಬಂಧವು ಕರ್ಮದಿಂದಲೇ ಉಂಟಾಗುವುದು. ಸ್ವತಸ್ಸಿದ್ಧವಾದುದಲ್ಲ.

ಮನಸ್ಸಿನ ರೂಪವೇನು? ಮನಸ್ಸಿಗೆ ಆತ್ಮಾಕಾರವೇ ಸ್ವಭಾವಸಿದ್ಧವಾದುದು. ವಿಷಯಾಕಾರವೊಂದು ಇಲ್ಲದಂತಾದಾಗ ಸಂಕಲ್ಪಲಯವಾಗಿ ಸ್ವಾರ್ಥಸಿದ್ಧವಾದ ಆತ್ಮಾಕಾರವೇ ಸಿದ್ಧವಾಗುವುದು. ಆತ್ಮನ ಬಿಂಬರೂಪಚಿತ್ಪ್ರತಿಬಿಂಬದಿಂದ ಆತ್ಮನ ಆಕಾರವಾಗಿರುತ್ತೆ ಈ ಮನಸ್ಸು ಹೀಗಿದೆ.

तुच्छाऽनिर्वचनीया च वास्तवी चेत्यसौ त्रिधा ।
ज्ञेया माया त्रिभिर्बोधैः श्रौतयौक्तिकलौकिकैः ॥ पञ्चदशी चित्र. १३०

श्रौतबोधेन तुच्छा, युक्तिदृष्ट्या अनिर्वचनीया, लोकदृष्ट्या वास्तवी माया॥

ಈ ಜಗತ್ತಿನ ಭವಿತವ್ಯವೇನೆಂದು ಒಬ್ಬರು ಕೇಳಿದ ಪ್ರಶ್ನೆಗೆ ಶ್ರೀ ರಮಣ ಮಹರ್ಷಿಗಳು ಹೇಳಿದರು - ನಿಮಗೆ ಜಗತ್ತಿನ ಉಸಾಬರಿ ಏಕೆ? ನಿಮಗೆ ವರ್ತಮಾನ ಕಾಲದ ಜಗತ್ತಿನ ಸ್ಥಿತಿಗತಿಗಳೆಲ್ಲವೂ ತಿಳಿದಿದೆಯೋ? ಅಥವಾ ಸದಾ ವರ್ತಮಾನ ಸ್ವರೂಪವಾದ ತಾನು ಗೊತ್ತೇ? ಅದೇ ತಿಳಿಯದಿರುವಾಗ ಇನ್ನು ಭವಿಷ್ಯತ್ಕಾಲದ ಅಥವಾ ಭೂತಕಾಲಕಾಲದ ಜಗತ್ಸೃಷ್ಟಿ ಲಯಗಳ ಮಾತೇಕೆ? ಮೊದಲು ವರ್ತಮಾನವನ್ನು ತಿಳಿದುಕೊಳ್ಳಿ. ಆಗ ಭೂತ ಭವಿಷ್ಯಗಳೆಲ್ಲಾ ತನಗೆ ತಾನೇ ನಿಮಗೆ ತಿಳಿಯುವುದು.

